ಮಾನಸಿ

ತಿಂಗಳ ಪತ್ರಿಕೆ ಮೇ ೧೯೯೦



ಮಾನಸ

ಸಂಪುಟ : ೩ ಸಂಚಿಕೆ ೫
ಮೇ ೧೯೯೦

ಸಂಪಾದಕೀಯ ಮಂಡಳಿ
ರಾಜೇಶ್ವರಿ ಎಚ್. ಎಸ್., ಸರಸ್ವತಿ ದು.,
ಚಂಪಾವತಿ ಎಚ್. ಎಸ್.,
ಸವಿತ ಎ., ಗೀತಾ ಜಿ. ಎಸ್.

ಸಲಹೆ—ಸಹಕಾರ
ಇಳಾವಿಜಯ

ವಿಳಾಸ "ಮಾನಸ ತಿಂಗಳ ಪತ್ರಿಕೆ
ಪಂಚಾಯಿತಿ ರಸ್ತೆ
ಕಾಡುಗೋಡಿ (ಪೊ.)
ಬೆಂಗಳೂರು—**560-067.**

ಬಿಡಿಪ್ರತಿ: 2 ರೂ.
ಸೂಚನೆ: ವಾರ್ಷಿಕ ಚಂದಾ :**20**ರೂ.
ಆಜೀವ ಚಂದಾ :**250**ರೂ.
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು.
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.

ಈ ಸಂಚಿಕೆಯಲ್ಲಿ.......

ಈ ಸಂಚಿಕೆಯ ಮುಖಪುಟದ ಹಾಳೆಗಳಿಗೆ ಧನ ಸಹಾಯ ನೀಡಿದವರು: **ಶೈಲಜಾ ಕೆ. ಪಿ.**

ಮುಖಪುಟ : **ಆರ್. ಎಂ. ಹಡಪದ್**



ಸಂಪಾದಕೀಯ

ಮೇ ದಿನ ಕಾರ್ಮಿಕರ ಹಕ್ಕು ಬಾಧ್ಯತೆಯ ದಿನ. ತಮ್ಮ ರಟ್ಟೆಯ ಬಲವನ್ನು ಮಾತ್ರ ನೆಚ್ಚಿ ಬದುಕಬೇಕಾದ ಜನರ ಸಾಂಕೇತಿಕ ದಿನ. ಶೋಚನೀಯ ಬದುಕನ್ನು ಪ್ರತಿಭಟಿಸಿ ಉತ್ಪಾದನೆಯ ಚಕ್ರದ ಚಾಲನೆಯಲ್ಲಿ ತಮ್ಮ ಪ್ರಾಮುಖ್ಯತೆಗೆ ಸಂಘಟಿತ ದನಿ ನೀಡಿದ ಚರಿತ್ರಾರ್ಹ ದಿನ.

ಐತಿಹಾಸಿಕವಾದ ಈ ದಿನದ ಹೋರಾಟದ ತೆಕ್ಕೆಯಲ್ಲಿ ಸ್ತ್ರೀಯರ ಶ್ರಮ ಅಗೋಚರವಾಗಿರುವುದೂ ಐತಿಹಾಸಿಕ ಸತ್ಯ. "ಮನೆ" ಯೊಳಗೆ "ಮನೆ" ಯ ಹೊರಗೆ ಸ್ತ್ರೀಯರ ದುಡಿಮೆಗೆ ಸಿಕ್ಕಿದ್ದು ದ್ವಿತೀಯ ಸ್ಥಾನ. ಆದರೆ ೮೦ರ ದಶಕದಲ್ಲಿ ಸ್ತ್ರೀಯರ ಅಗೋಚರ ದುಡಿಮೆ ಕಣ್ಣಿಗೆ ಕಾಣಿಸಲಾರಂಭಿಸಿತು.

ನಮ್ಮ ದೇಶದಲ್ಲಿ ಕೇವಲ ಶೇ. ೬ ರಷ್ಟು ಮಹಿಳೆಯರು ಸಂಘಟಿತ ಕ್ಷೇತ್ರದಲ್ಲಿ ದುಡಿಯುತ್ತಿದ್ದಾರೆ. ಶೇ.೯೪ರಷ್ಟು ಜನರು ಅಸಂಘಟಿತ ಕ್ಷೇತ್ರದಲ್ಲಿ ಹರಿದು ಹಂಚಿ ಹೋಗಿದ್ದಾರೆ, ದನಿ ಇಲ್ಲದವರಾಗಿದ್ದಾರೆ, ಆರ್ಥಿಕ ಒತ್ತಡದಿಂದ ಮಹಿಳೆಯರು ದುಡಿಯುತ್ತಿದ್ದರೂ, "ಗೃಹಕೃತ್ಯ" "ಮನೆ" ಗೆ ಆದ್ಯತೆ ಕೊಡಬೇಕಾಗಿರುವುದು ಅನಿವಾರ್ಯವಾಗಿದೆ.

ಅಸಂಘಟಿತ ಕ್ಷೇತ್ರದಲ್ಲಿ ದುಡಿಯುವ ಮಹಿಳೆ ತನ್ನ ನ್ಯಾಯಬದ್ಧ ಹಕ್ಕುಗಳಿಂದ ವಂಚಿತಳಾಗಿದ್ದಾಳೆ. ದುಡಿಮೆ ಅನಿವಾರ್ಯವಾಗಿ ಸಂಘಟಿತಳಾಗದೇ ತ್ರಿಶಂಕು ಸ್ಥಿತಿಯಲ್ಲಿ ನುಗ್ಗಿ ನಲುಗುತ್ತಿದ್ದಾಳೆ. ಅಸಮರ್ಪಕ ವೇತನ, ಹೆಚ್ಚು ಅವಧಿ ದುಡಿಮೆ, ರಜೆ, ಹೆರಿಗೆ ಮುಂತಾದ ಸೌಲಭ್ಯಗಳಿಲ್ಲದೆ, ಕನಿಷ್ಠ ಬದುಕು ತಳ್ಳುತ್ತಿದ್ದಾಳೆ.

ಹಳ್ಳಿಗಾಡುಗಳಲ್ಲಿ ಬದುಕುವ ಸ್ತ್ರೀಯರ ಬದುಕು ಇನ್ನೂ ಶೋಚನೀಯ. ಉದ್ಯೋಗಾವಕಾಶಗಳಿಲ್ಲದೆ, ಸಂಪ್ರದಾಯಿಕವಾಗಿ ಮಾಡಿಕೊಂಡು ಬಂದ ಉದ್ಯೋಗಗಳನ್ನು ಕೈಯಿಂದ ಕಳೆದುಕೊಳ್ಳುತ್ತಾ. ಕೇವಲ ಕೂಲಿನಾಲಿ ಮಾಡಿ ಉಸಿರಾಡಬೇಕಾಗಿದೆ. ದುಡಿಮೆ ಇಲ್ಲದಾಗ ಖಾಲಿ ಪಾತ್ರೆಯ ನೋಡಿ ನಿಟ್ಟುಸಿರು ಬಿಡುವಂತಾಗಿದೆ. ಇಲ್ಲಿ ಸ್ತ್ರೀಯರ ದುಡಿಮೆ ಅಗೋಚರದ ಅಗೋಚರತೆಯನ್ನೂ ತಲುಪುತ್ತಿದೆ.

ಹೀಗೆ ಕನಿಷ್ಠ ಜೀವನಕ್ಕೆ ಒಡ್ಡಿಕೊಂಡ ಮಹಿಳೆಯನ್ನು ಬೆಲೆ ಏರಿಕೆ ಮತ್ತಷ್ಟು ಕುಗ್ಗಿಸುತ್ತದೆ. ಕುಟುಂಬದ ಜವಾಬ್ದಾರಿ ಅವಳ ಹೆಗಲ ಮೇಲಿರುವುದರಿಂದ ಸ್ತ್ರೀಯರ ದುಡಿದು ಮತ್ತಷ್ಟು ಸಂಕೀರ್ಣವಾಗಿ ಉಸಿರುಗಟ್ಟುವಂತೆ ಮಾಡುತ್ತಿದೆ. ಬಸ್ ದರದ ಹೆಚ್ಚಳ, ವಿದ್ಯುತ್‌ಚ್ಛಕ್ತಿ ಬೆಲೆ, ಆಕಾಶಕ್ಕೇರುತ್ತಿರುವ ಪದಾರ್ಥಗಳ ಬೆಲೆ ಅವಳನ್ನು ಗಾಣದೆತ್ತಿನಂತೆ ಮಾಡುತ್ತಿವೆ: ಬದುಕೇ ಅಗ್ಗವಾದ ಈ ದಿನಗಳಲ್ಲಿ ಉಳಿದಿರುವ ದಾರಿಯೆಂದರೆ ಸುತ್ತಮುತ್ತಿನ ರಾಜಕೀಯ ಪರಿಸರಕ್ಕೆ ಒಳಗಣ್ಣು ತೆರೆಯುವುದು.

ಬಸ್ ದರ ಏರಿಕೆ

ದುಡಿಯುವ ಮಹಿಳೆಯರ ಹೆಗಲ ಮೇಲೆ ಮತ್ತಷ್ಟು ಹೊರೆ



ಗೀತಾ ಜಿ. ಎಸ್.
ರಾಜೇಶ್ವರಿ ಎಚ್. ಎಸ್.

ಬೆಲೆ ಏರಿಕೆ ಮಹಿಳೆಯರನ್ನು ಶೋಚನೀಯ ಸ್ಥಿತಿಗೆ ತಳ್ಳುತ್ತದೆ. ಈಗಿರುವ ಸಾಮಾಜಿಕ ಸಂಬಂಧದಲ್ಲಿ ಕುಟುಂಬದ ಸಂಪೂರ್ಣ ಜವಾಬ್ದಾರಿ ಮಹಿಳೆಯರ ಹೆಗಲ ಮೇಲಿರುವುದರಿಂದ ಬೆಲೆ ಏರಿಕೆ ಅವರನ್ನು ಇನ್ನಷ್ಟು ಉಸಿರುಗಟ್ಟಿಸುತ್ತದೆ. ಬದುಕು ತೀರಾ ಅಗ್ಗವಾದ ಇಂತಹ ದುಸ್ತರ ಆರ್ಥಿಕ ಪರಿಸ್ಥಿತಿಯಲ್ಲಿ ಕುಟುಂಬ ನಿಭಾಯಿಸ ಬೇಕಾದ ಸ್ತ್ರೀ ಅನಿವಾರ್ಯವಾಗಿ ತನ್ನ ವ್ಯಕ್ತಿತ್ವವನ್ನು ಕಡೆಗಣಿಸಬೇಕಾಗುತ್ತದೆ. ಮತ್ತಷ್ಟು ಹೊರೆಯನ್ನು ಹೊರಬೇಕಾಗುತ್ತದೆ. ಸರ್ಕಾರ ಬಸ್‌ದರವನ್ನು ಹೆಚ್ಚಿಸಿರುವುದರಿಂದ ಮಹಿಳೆಯರ ಮೇಲುಂಟಾಗುವ ಪರಿಣಾಮವನ್ನು ಇಲ್ಲಿ ಚಿತ್ರಿಸಲಾಗಿದೆ.

"ನಿಮ್ಮನೆ ಆಳಾಗೋಗ, ನಿಮ್ಮನೆ ಕಾಯ್ವಾಗ ನಿನ್ನೆ ತಂಕ ಎಸ್ಟ್ ಕಮ್ಮಿ ತಗಂಡ, ಈವಾಗ್ ನೀ ಬಂದು ಇಸ್ಟ್ ಕೇಳ್ತೀಯಲ್ಲ, ನಾ ತಗಳಾಕಿಲ್ಲ ಓಗ್. ನೀನೊಬ್ನೆ ಬದ್ಕೋದಂತ ತಿಳ್ದೀಯೇನ್ ಓಗಯ್ಯ ಓಗು" — ಒಂದೇ ಸಮನೆ ಬೈಗುಳ ಪ್ರವಾಹ ಹರಿಯುತ್ತಿತ್ತು ಆ ಅಜ್ಜಿಯ ಬಾಯಿಯಿಂದ. ಎದುರಿಗಿದ್ದ ಕಂಡಕ್ಟರ್ ಬೆವರೊರೆಸಿಕೊಳ್ಳುತ್ತ, "ಅಜ್ಜಿ, ನೀ ನೇನ್ ನಂಗೆ ದುಡ್ಡು ಕೊಡ್ತಿದ್ದೀಯೇನ್? ಗೌರ್ಮೆಂಟಿಗೆ ಅವ್ವಾ. ನೀನು ಕೊಡೋ ದುಡ್ಡು ಸರ್ಕಾರಕ್ಕೆ ಹೋಗುತ್ತೆ". "ಅಂಗಾ, ಅಂಗಾರೆ ಸರಕಾರದೋರು ಬಂದ್ ಕೇಳ್ಲಿ, ನಾ ಅವ್ರಿಗೇ ಕೊಡ್ತೀನಿ" ಎಂದು ಪಟ್ಟಾಗಿ ಕೂತಿತು ಅಜ್ಜಿ. ಕಂಡಕ್ಟರ್ ಹರಸಾಹಸ ಮಾಡಿದ, ಬಗ್ಗಲಿಲ್ಲ ಆ ಮುದುಕಿ. ಕಡೆಗೆ ಹೆದರಿಸಿದ, "ಚೆಕಿಂಗ್‌ನೋರ್ ಬಂದ್ರೆ ೫೦-೧೦೦ ರೂ. ದಂಡ ಹಾಕ್ತಾರೆ, ಅಥವಾ ಜೈಲಿಗೆ ಹೋಗಬೇಕು" ಎಂದು. "ನಿನ್ನೆ ತಂಕ ಎಲ್ಡು ರೂಪಾಯಿತ್ತು, ಇವಾಗ ೩ ರೂಪಾಯಿ ಕೊಡ್ಬೇಕಾ? ಅವಯ್ಯನೇ ಸರಿ, ನೀನಿನ್ಮೇಗೆ ಈ ಕೆಲ್ಸಕ್ಕೆ ಬರ್ಬೇಡಾ" ಎಂದು ಶಾಪ ಹಾಕುತ್ತ ದುಡ್ಡನ್ನು ಕಂಡಕ್ಟರ್ ಕೈಗಿತ್ತಳು. ಆ ಕಂಡಕ್ಟರ್ ಮುಖ ಬಾಡಿಹೋಯಿತು.

ಅವ ನೊಂದುಕೊಂಡು, "ಬೆಳಗಿನಿಂದ ಇಂಥದೆ ಮಾತು ಕೇಳಿ ಕೇಳಿ ಬೇಜಾರಾಗ್ಬಿಟ್ಟಿದೆ. ಜನರ ಸಹನೆಗೂ ಮಿತಿ ಇದೆ ಅನ್ನೋದೆ ಮರ್ತಿದೆ ನಂ ಸರ್ಕಾರ. ಹೀಗೆ ಇದ್ದಕ್ಕಿದ್ದಂತೆ ಟಿಕೆಟ್ ಬೆಲೆ ಏರಿಸಿದ್ರೆ ಜನರಾದ್ರೂ ಏನ್ ಮಾಡ್ತಾರೆ? ಜನರ ಕೈಗೆ ಸಿಗುವುದು ನಾವು, ಅವರ ಸಿಟ್ಟು, ಅಸಹನೆ, ಅಸಹಾಯಕತೆ ನಮ್ಮನ್ನು ಹಿಂಡುತ್ತದೆ, ಇವಾವ್ದೂ ಮೇಲಿನವರ ತಲೆಗೇ ಹೋಗುವುದಿಲ್ಲ" ಎಂದು ಪರಿತಪಿಸಿದ. ಇದು ಮೇ ೭ರ ಸಂಜೆ ಬಿ. ಟಿ. ಎಸ್. ಬಸ್ಸೊಂದರಲ್ಲಿ ನಡೆದ ಕಥೆ.

ಸರ್ಕಾರ ಬಸ್ಸಿನ ಟಿಕೆಟ್ ದರ ಏರಿಸಲಿದೆ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯವಾಗಿತ್ತಾದರೂ ಈ ರೀತಿ 'ಹೈ ಡೋಸ್ ಇಂಜೆಕ್ಷನ್' ನೀಡಿ ಜನರು ಇಷ್ಟೊಂದು ಅಸಹಾಯಕತೆಯಲ್ಲಿರಬೇಕಾಗುತ್ತದೆಂದು ಯಾರೂ ಊಹಿಸಿರಲ್ಲಿಲ್ಲ ಬೆಂಗಳೂರಿನಂತಹ ಪಟ್ಟಣಗಳಲ್ಲಿ ಪ್ರತಿಯೊಂದನ್ನು ಕೊಂಡು ತರುವಂಥ ಪರಿಸ್ಥಿತಿ. ಇತ್ತೀಚಿನ ಬಜೆಟ್‌ನ ಉಪಕಾರದಿಂದಾಗಿ ಏರಿರುವ ಬೆಲೆಗಳಿಂದ ಬಹಳಷ್ಟು ಅಗತ್ಯವಸ್ತುಗಳನ್ನು "ಡಿಸ್ಕೌಂಟ್" ಮಾಡಿ ಸಂಸಾರ ತೂಗಿಸಲು, ಸರ್ಕಸ್ ನಡೆಸುವ ಗೃಹಿ

ಣಿಗೆ ಈ ಬಸ್ಸಿನ ದರದ ತೀವ್ರ ಏರಿಕೆ ಕಂಗಾಲು ಪರಿಸ್ಥಿತಿ ನಿರ್ಮಿಸಿದೆ ದಿನನಿತ್ಯ ಆಫೀಸಿಗೆ ಹೋಗುವವರು ಶಾಲಾಕಾಲೇಜುಗಳಿಗೆ ಹೋಗುವವರು ಇದ್ದೇ ಇರುತ್ತಾರೆ. ಸಾರಿಗೆಯ ಖರ್ಚು ಅತ್ಯಗತ್ಯದ ಬಾಬ್ತು, ಅದನ್ನು ಬಿಡುವಂತೇ ಇಲ್ಲ. ದುಡಿಮೆಯ ಫಲದಲ್ಲಿ ಬ್ರಹ್ಮಪಾಲು ಇದರದ್ದೇ ಆದರೆ ಹೇಗೆ? ಎಂಬುದು ಪ್ರಶ್ನೆ. ಬ್ಬಒ ಗೃಹಿಣಿ, “ಬೆಳಗಿನ ಜಾವವೇ ಎದ್ದು ಜಾಗಿಂಗ್ ಮಾಡುವ ಬದಲು ಸ್ಕೂಲ್‌ಕಾಲೇಜಿಗೆ ನಡೆದೇ ಜಾಗಿಂಗ್ ಮಾಡುವ ಪರಿಸ್ಥಿತಿ ಬರುತ್ತೆ ಇನ್ಮುಂದೆ” ಎಂದು ಭವಿಷ್ಯ ನುಡಿದರು. ಸ್ವಂತವಾಹನ ಎಷ್ಟು ಮಂದಿಗೆ ಹೊಂದಲು ಸಾಧ್ಯ? ಸ್ವಂತ ವಾಹನದ ಖರ್ಚು ಭರಿಸಲು ಸಾಧ್ಯವೆಂದು ಸಿಟಿ ಬಸ್‌ಗಳನ್ನು ನಂಬಿದವರ ಗತಿ ಶೋಚನೀಯ. “ಇಡೀ ದೇಶದ ಆಯ-ವ್ಯಯ ತೂಗಿಸಲು ಅರ್ಥಮಂತ್ರಿಗೆ ಕಷ್ಟ, ನಿಜ ಆದರೂ ಅವರು ಟ್ಯಾಕ್ಸ್ ಎಂದು ಜನರಿಂದ ವಸೂಲ್ಮಾಡ್ತಾರೆ, ಹೊಟ್ಟೆ ತುಂಬಿದವರಿಂದ ಸಿ.ಬಿ.ಐ. ದಾಳಿ ಎಂದು ಪಡೆಯುತ್ತಾರೆ. ಆದರೆ ನಮ್ಮ ಸಂಸಾರ ತೂಗಿಸಲು ನಾವು ಯಾರಿಂದ, ಹೇಗೆ ಹಣ ಪಡೆಯುವುದು. ಸಂಸಾರಗಳ ಆಯ – ವ್ಯಯ ಯಾವ ಮಹಾನುಭಾವರಿಗೂ ಅನುಭವವಿಲ್ಲ, ನಮ್ಮ ಕಷ್ಟ ಯಾರಿಗೂ ಬೇಡ” — ಎಂದು ದುಡಿಯುವ ಗೃಹಿಣಿ ತಮ್ಮ ಅಳಲು ತೋಡಿಕೊಂಡಿದ್ದರು.

ಕೆಂಪಮ್ಮ ನಗರದಿಂದ ಸುಮಾರು ಮೂವತ್ತೈದು ನಲವತ್ತು ಕಿಲೋಮೀಟರ್ ದೂರದಲ್ಲಿರುವ ಗ್ರಾಮವೊಂದರ ಮಹಿಳೆ. ಮುಂಜಾನೆದ್ದು ಬಸ್ಹಿಡಿದು ಸಿಟಿ ಮಾರ್ಕೆಟ್‌ಗೆ ಬಂದು ಹೂವನ್ನು ಕೊಂಡು, ಕಟ್ಟಿ ಮುಗಿಸಿ ವರ್ತನೆ ಹಿಡಿದುಕೊಂಡಿರುವ ಮನೆಗಳಿಗೆ ಮಾರುವುದರಿಂದ ಜೀವನ ನೂಕುವಾಕೆ. “ಅಯ್ಯೋ! ತಿಂಗಳಿಗೆ ೭೫ರೂ. ಜಾಸ್ತಿಯಾಯ್ತಲ್ಲ ಬಸ್ಸಿಗೆ. ಹೇಗೆ ವ್ಯಾಪಾರ ಮಾಡುವುದು” ಎಂಬ ಚಿಂತೆ ಆಕೆಯದು. ಬಸ್ ದರದ ಹೆಚ್ಚಳದಿಂದ ಈಗ ಆಕೆ ನಗರಕ್ಕೆ ಹೋಗುವುದನ್ನು ಕಡಿಮೆ ಮಾಡಿದ್ದಾಳೆ. ಗುರುತಿನವರ ಜೊತೆ ಮಾಡಿ ತಮ್ಮ ಅಪ್ರಾಪ್ತ ವಯಸ್ಸಿನ ಪುತ್ರನನ್ನು ಕಳಿಸುತ್ತಾಳೆ. ಅವನು ಸಣ್ಣವನಾದ್ದರಿಂದ ಅರ್ಧ ಛಾರ್ಜು. ಅನುಭವವಿರದ ಮಗನನ್ನು ಕಳಿಸುವುದರಿಂದಲೂ ಆಕೆ ನಷ್ಟವನ್ನು ಅನುಭವಿಸುತ್ತಿದ್ದಾಳೆ. ಆಕೆಯೇ ಹೋದರೆ, ಉತ್ತಮ ಗುಣಮಟ್ಟದ ಹೂಗಳನ್ನು ಆಯ್ದು, ಬೆಲೆಯಲ್ಲಿ ಚೌಕಾಸಿ ಮಾಡಿ, ಹತ್ತು, ಇಪ್ಪತ್ತು ಪೈಸೆ ಉಳಿಸಿ ಲಾಭ ಗಳಿಸುತ್ತಿದ್ದಳು. ಈ ಗೊಂದಲದಿಂದಾಗಿ ಈ ವ್ಯಾಪಾರವನ್ನೇ ಬಿಟ್ಟುಬಿಡುವುದೆ? ಎಂಬ ಪ್ರಶ್ನೆ ಆಕೆಯ ಮುಂದಿದೆ. ಸುಮಾರು ೨೦ ವರ್ಷಗಳಿಂದ ನಡೆಸಿಕೊಂಡು ಬಂದ ವ್ಯಾಪಾರವನ್ನು ಬಿಟ್ಟರೆ ತಿನ್ನುವ ಅನ್ನಕ್ಕೇನು ಗತಿ ಎಂದು ನಿಟ್ಟುಸಿರು ಬಿಡುತ್ತಾಳೆ.

ಏಳೆಂಟು ಸಾವಿರ ಅಡ್ವಾನ್ಸ್, ಹೆಚ್ಚು ಬಾಡಿಗೆಯನ್ನು ಕೊಡಲಾಗದ ಕಮಲಾ ನಗರದ ಹೊರವಲಯದಲ್ಲಿ ಮನೆ ಮಾಡಿದ್ದಾಳೆ. ಹಾಲು, ಮಗುವನ್ನು ನೋಡಿಕೊಳ್ಳುವವರಿಗೆ ಹಣ, ರೇಷನ್, ಕೆಲಸದವರಿಗೆ, ಬಾಡಿಗೆ ಹೀಗೆ ಕೊಡುತ್ತಾ, ತಿಂಗಳ ಕೊನೆಯಲ್ಲಿ ಅವಳ ಕೈ ಬರಿದು ಒಂದು ಕಾಫಿಯನ್ನು ಕುಡಿಯಲು ಹಿಂದೆ ಮುಂದೆ ನೋಡುವ ಅವಳು ಹಲ್ಲುಕಚ್ಚಿ ಸಂಸಾರ ತೂಗಿಸಬೇಕಾಗಿದೆ.

ಕಮಲಳಂತೆ, ನಾಗಮ್ಮ ಅವಳ ಗಂಡ ನಗರದ ಹೊರವಲಯದಲ್ಲಿ ಮನೆಮಾಡಿ ಕೆಲಸಕ್ಕೆ ಸಿಟಿ ಬಸ್ಸಿನಲ್ಲಿ ಓಡಾಡುವರು. ಖಾಸಗಿ ಸಂಸ್ಥೆಗಳಲ್ಲಿ ಕೆಲಸಮಾಡುವ ಇವರ ಸಂಬಳವೂ ಕಡಿಮೆ. ಇಬ್ಬಬ್ಬರು ದುಡಿಯುತ್ತಿದ್ದರೂ ಮೂರು ಮಕ್ಕಳು, ಸ್ಕೂಲು, ಫೀಸು, ಹಾಲು, ಮನೆಬಾಡಿಗೆ, ಕರೆಂಟು ಹೀಗೆ ಸಂಸಾರದ ನೊಗಕ್ಕೆ ಮೌನವಾಗಿ ಕೊರಳು ಕೊಟ್ಟವರು. ಬೆಂಗಳೂರಿನ ಜೀವನ ದುಬಾರಿ ಎಂದು ಹಳ್ಳಿಯೊಂದರಲ್ಲಿ ಮನೆ ಹೂಡಿದರು. ಈಗ ಬಿ.ಟಿ.ಎಸ್ ನ ಬೆಲೆ ಏರಿಕೆಯ ಬಿಸಿ ಅದರ ತಲೆಗೇರಿ ಏನು ಮಾಡಬೇಕೆಂಬ ಬೃಹದಾಕಾರದ ಪ್ರಶ್ನೆ ಅವರ ಮುಂದಿದೆ. ಸರ್ಕಾರಿ ನೌಕರರಾದರೆ ಬೆಲೆ ಏರಿಕೆ ಎಂಬ ನೆಪವೊಡ್ಡಿ ತುಟ್ಟಿಭತ್ಯೆ ಬೇಡಿಕೆಯನು ಇಟ್ಟಾರು? ಸಂಬಳದ ಜೊತೆಗೆ ಗಿಂಬಳದ ಅವಕಾಶ ಅವರಿಗುಂಟು. ಆದರೆ ನಾವೀಗ ಹೆಚ್ಚಿಸಿ ಎಂದು ಕೇಳಿದರೆ ಕೆಲಸ ಬಿಟ್ಟು ಹೋಗಿ ಎಂದು ಕೈಯಾಡಿಸಿ ಬಿಡುತ್ತಾರೆ. ನೋಡಿ, ಹೆಚ್ಚು ಬಸ್ ಛಾರ್ಜ್ ಕೊಡಬೇಕೆಂದರೆ ಮನೆ ಖರ್ಚಿನಲ್ಲಿ ಕಡಿಮೆ ಮಾಡಬೇಕಾಗುತ್ತದೆ. ಅರ್ಧ ಲೀಟರ್ ಹಾಲು ತೆಗೆದುಕೊಳ್ಳುತ್ತಿದ್ದ ನಾನು ಈಗ ಕಾಲು ಲೀಟರ್‌ಗೆ ಇಳಿಸಬೇಕಾಯ್ತು. ನನ್ನ ಕಾರ್ಖಾನೆ ಇಲ್ಲಿಂದ ಏಳು ಕಿಲೋಮೀಟರ್ ಇರುವುದರಿಂದ ಬೆಳಿಗ್ಗೆ ಮೊ

ಕೆಲ್ಸ ಮುಗಿಸಿ, ನಡೆದೇ ಹೋಗುತ್ತೇನೆ. ಸಂಜೆ ಬರುವಾಗ ಬಸ್ಸಿನಲ್ಲಿ ಬರುತ್ತೇನೆ. ಆಗ ಒಂದು ಕಡೆಯ ಛಾರ್ಜು ಉಳಿಸಿದಂತಾಗುತ್ತದೆ" ಎನ್ನುವಳು.

ಸುಗುಣ ಮತ್ತಾಕೆಯ ಪತಿ ನಗರದಿಂದ ೨೫ ಕಿ. ಮೀ. ದೂರದ ಹಳ್ಳಿಯಲ್ಲಿರುವವರು. ಸುಗುಣ

ತಮ್ಮ ಊರಿನಿಂದ ಬಹುದೂರದ ಊರಿನ ಕಾಲೇಜಿಗೆ ಪ್ರಯಾಣಿಸುತ್ತಿದ್ದ ಪಾರ್ಟ್‌ಟೈಂ ಲೆಕ್ಚರರ್ ಆಗಿರುವ ನಳಿನಿ ಕೆಲಸ ಬಿಡುವ ಯೋಚನೆಯಲ್ಲಿದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಅದೇ ಉದ್ಯೋಗದಲ್ಲಿರುವ ಆಕೆ ಬೇರೆಡೆಗಳಲ್ಲಿ ಕೆಲಸ ಸಿಗದೆ ಎಷ್ಟಾದರೂ ಸರ್ಕಾರಿ ನೌಕರಿಯಲ್ಲವೆ ಇಂದಲ್ಲ ನಾಳೆ ಒಂದು ದಾರಿಯಾದೀತು ಎಂದೇ ಮುಂದುವರೆಸಿಕೊಂಡು ಬಂದಿದ್ದರು. ಸರ್ವಿಸ್ ಲೆಕ್ಕವಾದರೂ ಸಿಗುವುದಲ್ಲ ಎಂಬ ಆಶಯದಿಂದ. ಕೆಳಮಧ್ಯಮ ವರ್ಗದ ಕುಟುಂಬದಿಂದ ಬಂದ ಈಕೆಗೆ ಕಾಲೇಜಿರುವ ಊರಿನಲ್ಲೇ ಮನೆಮಾಡಲು ಹಣದ ತೊಂದರೆ, ಗಂಡಸರಾದರೂ ಎರಡು, ಮೂರು ಜನ ಸೇರಿ ಮನೆ ಮಾಡುತ್ತಾರೆ. ಖರ್ಚು ಕಡಿಮೆಯಾಗುತ್ತದೆ ಆದರೆ ಈಕೆಗೆ ಅದೇ ರೀತಿ ಸ್ನೇಹಿತೆಯರಾರೂ ಸಿಗದಿದ್ದುದರಿಂದ ಎಷ್ಟೇ ದೈಹಿಕಶ್ರಮವಾದರೂ ಮುಂಜಾನೆಗೆ ಎದ್ದು ಸಿದ್ಧ ಮಾಡಿಕೊಂಡು 9-30ಕ್ಕೆ ಕಾಲೇಜಿನಲ್ಲಿ ಹಾಜರಾಗುತ್ತಿದ್ದರು. ಖಾಸಗಿ ಬಸ್‌ಗಳ ಸೌಲಭ್ಯವೂ ಇವರ ಸಮಯಕ್ಕೆ ಇಲ್ಲದುದರಿಂದ ಈಕೆಗೆ ಬಸ್ ದರದ ಏರಿಕೆ ತಲೆಯ ಮೇಲೆ ಹೆಬ್ಬಂಡೆ ಎಳೆದಂತಾಗಿದೆ. ಮನೆಯಿಂದ ಹಣ ಪಡೆಯಬೇಕಲ್ಲ ಎಂಬ ನೋವಿನಿಂದ ಮನೆ ಮಾಡದೆ ಇಷ್ಟು ವರ್ಷಗಳವರೆಗೆ ಒದ್ದಾಡಿ ಈಗ ಹೆತ್ತವರ ಬಳಿ ಬಸ್ಸಿಗೆ, ಛಾರ್ಜಿಗೆ ಎಂದು ಹೇಗೆ ಕೈ ಚಾಚಲಿ? ನನ್ನ ಹಿಂದೆ ಇನ್ನೂ ಓದುವ ಸಹೋದರ ಸಹೋದರಿಯರಿದ್ದಾರಲ್ಲ ಅವರ ಪ್ರಯಾಣದ ದರವನ್ನೂ ಭರಿಸಬೇಕಲ್ಲ, ಹೆತ್ತವರಾದರೂ ಎಷ್ಟು ದಿನವೆಂದು ನಮಗೆ ಹಣ ನೀಡಬಲ್ಲರು? ಎಂದು ನುಡಿಯುವ ಈಕೆ ಈಗ ಮನೆಯಲ್ಲೇ ಉಳಿಯುವ ಯೋಚನೆಯಲ್ಲಿದ್ದಾರೆ. ಇಷ್ಟು ವರ್ಷದ ಶ್ರಮ ಮಣ್ಣು ಹೊತ್ತಂತೆ ವ್ಯರ್ಥವಾಯಿತಲ್ಲ ಎಂಬ ಅಳಲು ಈಕೆಗೆ. ಇಂಥ ಮಂದಿ ಎಷ್ಟೆಂದು ಲೆಕ್ಕಮಾಡಲು ಸಾಧ್ಯವೇ?

ಖಾಸಗಿ ಶಾಲೆಯಲ್ಲಿ ಉಪಾಧ್ಯಾಯಿನಿ. ಆಕೆಗೆ ತರಗತಿಗಳು ಆರಂಭವಾಗುವ ಸಮಯ ಒಂದೇ ರೀತಿ ಇರುವುದಿಲ್ಲ. ವಾರದಲ್ಲಿ ೩ದಿನ ಬೆಳಿಗ್ಗೆ ೮ಕ್ಕಾದರೆ, ಮತ್ತೆ ೩ ದಿನ ಮಧ್ಯಾಹ್ನ ೧ಗಂಟೆ ಮೇಲೆ. ಈಕೆಯ ಪತಿಗೆ ಸರ್ಕಾರಿ ಕಚೇರಿಯಲ್ಲಿ ಕೆಲಸ. ಆತನ ಬಳಿ ದ್ವಿಚಕ್ರ ವಾಹನವೂ ಇದೆ. ಆದರೆ ಪತಿ ಪತ್ನಿಯರಿಬ್ಬರಿಗೂ ಸಮಯದ ಹೊಂದಾಣಿಕೆಯಿಲ್ಲದುದರಿಂದ ಆಕೆ ಬಸ್ಸಿನಲ್ಲಿ ಪಯಣಿಸುತ್ತಾಳೆ. ಮೊನ್ನೆ, ಬಸ್ ದರ ಏರಿತಲ್ಲ ಎಂದು ಆಡಳಿತ ವರ್ಗವನ್ನು ತರಗತಿಗಳನ್ನು ಸರಿಯಾಗಿ ಹೊಂದಿಸಿಕೊಡಲು ಕೇಳಿಕೊಂಡಾಗ, ಪಟ್ಟಣದಿಂದ ಅಷ್ಟು ದೂರ ಮನೆ ಮಾಡಲು ಹೇಳಿದವರಾರು ಎಂಬ ಪ್ರಶ್ನೆಯನ್ನು ಎದುರಿಸಬೇಕಾಯ್ತು ಹೊರತು ಈಕೆಯ ಕಷ್ಟಕ್ಕೆ ಪರಿಹಾರ ಸಿಗಲಿಲ್ಲ. ೨, ೩ ಬಸ್‌ಗಳನ್ನೂ ಬದಲಾಯಿಸಿ ಮನೆಗೆ ಬರುವಷ್ಟರಲ್ಲಿ ಸಾಕಷ್ಟು ಸುಸ್ತಾಗಿರುವುದರ ಜೊತೆಗೆ ಹೆಚ್ಚು ಹಣ ಕೈಯಿಂದ ಹೋಯಿತಲ್ಲ ಎಂಬ ನೋವೂ ಸೇರಿ ಮತ್ತಷ್ಟು ಶಕ್ತಿಗುಂದಿದಂತಾಗುತ್ತದೆ. ಆದರೆ ಇದು ಕೆಲವೊಮ್ಮೆ ನಡೆಯುವ ಪ್ರಸಂಗವಾಗಿರದೆ, ತಿಂಗಳಲ್ಲಿ ಮುಕ್ಕಾಲುವಾಸಿ ಇದೇ ರೀತಿ ಪ್ರಯಾಣ ಮಾಡಬೇಕು ಆಕೆ.

ಬಸ್ ದರದಲ್ಲಿ ಉಂಟಾದ ಹೆಚ್ಚಳ, ಮುಗಿಲು ಮುಟ್ಟುವ ದಿನಸಿ ಬೆಲೆ, ವಿದ್ಯುಚ್ಛಕ್ತಿ ದರದಲ್ಲಿ ಹೆಚ್ಚಳ, ಹೀಗೆ ಬೆಲೆ ಏರಿಕೆ ತೀರಾ ಸಾಮಾನ್ಯವೆನ್ನುವಷ್ಟು ಸಲೀಸಾಗಿದೆ. ಬೆಲೆಯನ್ನು ಏರಿಸುವಾಗ ಗ್ರಾಹಕರ ಕೊಳ್ಳುವ ಸಾಮರ್ಥ್ಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗುತ್ತದೆ. ಕೆಳವರ್ಗಗಳಿಗೆ, ಮಧ್ಯಮ ವರ್ಗಗಳಿಗೆ ದೈನಂದಿನ ಸಂಸಾರ ತೂಗಿಸುವುದೇ ಒಂದು ಮಹತ್‌ಸಾಧನೆಯೆನಿಸುವಂತಾಗಿದೆ.

ಬೆಲೆ ಏರಿಕೆ ಒಂದು ಕುಟುಂಬದ ಗಂಡು ಹೆಣ್ಣಿನ ಮೇಲೆ ಒಂದೇ ಪರಿಣಾಮವನ್ನುಂಟು ಮಾಡುತ್ತದೆಯೇ? ಕೆಲವರು ಬೆಲೆಏರಿಕೆಯ ಪರಿಣಾಮ ಒಂದೇಯಾಗಿರುತ್ತದೆಯೆನ್ನಬಹುದ. ಗಂಡ ಹೆಂಡತಿ ಇಬ್ಬರೂ ದುಡಿಯುವ ಕುಟುಂಬವನ್ನೇ ಉದಾಹರಣೆ ತೆಗೆದುಕೊಳ್ಳೋಣ. ಹೆಂಡತಿಯು ದುಡಿದು, ಮನೆಯ ಖರ್ಚು, ವೆಚ್ಚದ ಜವಾಬ್ದಾರಿಯನ್ನು ವಹಿಸಿಕೊಂಡಿದ್ದರೂ, ಒಟ್ಟು ಕುಟುಂಬದ ನಿರ್ವಹಣೆ ಅವಳ ಮೇಲೇ ಇರುತ್ತದೆ. ಹೊರಗೆ ದುಡಿಯುವುದರ ಜೊತೆಯಲ್ಲಿ ದೈನಂದಿನ ಕೌಟುಂಬಿಕ ಜವಾಬ್ದಾರಿಯನ್ನು ಅವಳೇ ಹೊರಬೇಕಾಗಿರುವುದರಿಂದ ಬೆಲೆ ಏರಿಕೆಯು ದುಡಿಯುವ ಮಹಿಳೆಯರನ್ನು ವಿಶೇಷವಾಗಿ ಕುಗ್ಗಿಸುತ್ತದೆ.

ಸುಮಾರು ೫೦ ಕಿಲೋಮೀಟರ್ ಪ್ರಯಾಣ

ಸೋರಿಕೆ ಸಂಸ್ಥೆ

ಬಸ್ ದರ ಏರಿಸಲು ಉದ್ದುಪ್ದದ ಪಟ್ಟಿಯನ್ನು ನೀಡುತ್ತಿದೆ ಸಂಸ್ಥೆ. ಹೆಚ್ಚು ಬಸ್‌ಗಳನ್ನು ಹಾಕುತ್ತೇವೆ. ಹೆಚ್ಚಿನ ಸೌಲಭ್ಯ ಒದಗಿಸುತ್ತೇವೆ ಎಂಬೆಲ್ಲ ಹೆಗ್ಗಳಿಕೆ ತೋರುತ್ತಿರುವ ಸಂಸ್ಥೆ ತನ್ನ ನಷ್ಟಕ್ಕೆ ಕಾರಣ ವಿದ್ಯಾರ್ಥಿಗಳಿಗೆ ಮತ್ತಿತರರಿಗೆ ನೀಡುತ್ತಿರುವ ರಿಯಾಯಿತಿಯಿಂದ 5 ವರ್ಷದಿಂದ 5 ಕೋಟಿಯಿಂದ 30 ಕೋಟಿಗೆ ಏರಿದುದು ಎನ್ನುತ್ತದೆ. ಸಿಬ್ಬಂದಿ ವರ್ಗದ ಸಂಬಳದಲ್ಲಿನ ಏರಿಕೆ ಶೇ,37.2 ಡೀಸಲ್ ಬೆಲೆಯಲ್ಲಿ ಶೇ.19.1 ಟೈರುಗಳ ಬೆಲೆಯಲ್ಲಿ ಶೇ.33, ಬಿಡಿಭಾಗಗಳ ಬೆಲೆ ಮತ್ತು 72.2 ಛಾಸಿಗಳ ಬೆಲೆ ಶೇ,45.4 ಒಟ್ಟಾರೆ ನಿರ್ವಹಣ ವೆಚ್ಚ 37.2 ರಷ್ಟು ಹೆಚ್ಚಿದೆ ಎಂದು ಪ್ರಕಟಿಸಿದೆ. ಈ ಎಲ್ಲವನ್ನು ಭರಿಸಲು ಇರುವ ಏಕೈಕ ಮಾರ್ಗ ಪ್ರಯಾಣದ ದರ ಏರಿಕೆಯೆಂದು ಸಾರಿಗೆ ಸಚಿವರು ತಿಳಿಸಿದ್ದಾರೆ. ಪಕ್ಕದ ಮಹಾರಾಷ್ಟ್ರ ಗೋವಾಗಳಲ್ಲಿ ಶೇ,30 ರಷ್ಟು ಪ್ರಯಾಣದರ ಏರಿದೆ ಅದು ನಮ್ಮ ರಾಜ್ಯದಕ್ಕಿಂತಲೂ ಹೆಚ್ಚು ಎಂದಿದ್ದಾರೆ.

ಮಾನ್ಯ ಸಚಿವರಿಗೊಂದು ಪ್ರಶ್ನೆ ಜನಸಾಮಾನ್ಯರ ಮೇಲೆ ಇಷ್ಟು ಭಾರ ಹೇರಿರುವವರು ಸಂಸ್ಥೆಯ ದಕ್ಷತೆಯ ಬಗ್ಗೆ ಯಾವ ಕ್ರಮ ಕೈಗೊಂಡಿದ್ದಾರೆ? ಅಷ್ಟೇ ಅಲ್ಲದೆ ಇಷ್ಟು ಸಲವೂ ದರ ಏರಿದಂತೆ ನಷ್ಟದ ಪ್ರಮಾಣವೂ ಅಷ್ಟೇ ಏರುತ್ತ ಬಂದುದು ಇಂದಿನವರೆಗಿನ ಸಂಪ್ರದಾಯ ಆ ಕಾರಣದಿಂದಲೇ ' ಸೋರಿಕೆ ಸಂಸ್ಥೆ ' ಎಂಬ ಹೆಸರು ಪಡೆದಿರುವುದು. ಹೆಚ್ಚಿನ ಕಂಡಕ್ಟರ್‌ಗಳು ಬಸ್‌ಗಳಲ್ಲಿ ಕಡಿಮೆ ಎಂದರೆ ದಿನವೊಂದಕ್ಕೆ 50 ರೂ ಸಂಪಾದಿಸುತ್ತಿರುವುದು ಸರ್ವವೇದ್ಯ ಇವರ ಈ ಪರಿ ತಿಳಿದಿರುವ ಮೇಲಿನವರು ತಮ್ಮ ದರ್ಜೆಗೆ ಅನುಸಾರವಾಗಿ ' ಮಾಮೂಲು ' ಪಡೆದುಕೊಳ್ಳುತ್ತಾರೆ. ಹೀಗಾಗಿ ಬುಡದಿಂದ ತಲೆಯವರೆಗೂ ಭ್ರಷ್ಟಾಚಾರದ ಗೆದ್ದಲೇ ಹತ್ತಿರುವುದರಿಂದ ಪ್ರತಿ ವರ್ಷವೂ ಕೊರತೆಯ ಬಜೆಟ್ ಅನ್ನೇ ನಮ್ಮ ಮುಂದೆ ನೀಡುತ್ತಿದೆ ಸಂಸ್ಥೆ. ಇದನು ಸರಿಪಡಿಸದೆ ಕೇವಲ ಟಿಕೆಟ್ ದರ ಹೆಚ್ಚಿಸುತ್ತಾ ಹೋದರೆ ಈ ಮಹಾಶಯರು ತಮ್ಮ ಪರ್ಸೆಂಟೇಜ್‌ನ್ನೂ ಹೆಚ್ಚಿಸುತ್ತಾರೆ ವಿನಃ ದರ ಏರಿಸದುದರ ಉದ್ದೇಶ ಫಲಿಸುವುದೇ ಇಲ್ಲ. ಪಕ್ಕದ ರಾಜ್ಯಗಳನ್ನು ಉದಹರಿಸಿರುವ ಸಚಿವರು ತಮಿಳ್ನಾಡನ್ನೇಕೆ ಮರೆತಿದ್ದಾರೆ? ಕಳೆದ ಐದು ವರ್ಷದಲ್ಲಿ ಅಲ್ಲಿನ ಪ್ರಯಾಣದ ದರ ಶೇ,41.2 ರಷ್ಟು ಏರಿದ್ದರೆ ನಮ್ಮಲ್ಲಿ ಶೇ,75 ರಷ್ಟು ಮತ್ತೆ ಅಲ್ಲಿನ ಸಾರಿಗೆ ಸೌಲಭ್ಯವೂ ಉತ್ತಮವಾಗಿದೆ. ನಮ್ಮ ಬಸ್ಸುಗಳಂತೆ ಅಲ್ಲಿನ ಬಸ್ಸುಗಳು ಪ್ರಯಾಣಿಕರನ್ನು ಗಂಟೆಗಟ್ಟಲೆ ಸತಾಯಿಸುವುದಿಲ್ಲ. ನಗರ ಬೆಳವಣಿಗೆ ಸಂಖ್ಯೆ ಏರಿಕೆಯನ್ನು ಪ್ರಧಾನವಾಗಿ ತೋರಿಸುವವರಿಗೆ ಮದ್ರಾಸ್ ಸಹ ದೊಡ್ಡ ನಗರ,ಅಲ್ಲಿಯೂ ಜನಸಂಖ್ಯೆ ಹೆಚ್ಚು ಎಂದೇಕೆ ಹೊಳೆಯಲಿಲ್ಲ. ರಾಜ್ಯ ಸಾರಿಗೆ ವೆಚ್ಚ ಹೆಚ್ಚೆಂದು ಪರ ರಾಜ್ಯದ ಸಾರಿಗೆ ಸಂಸ್ಥೆಯನ್ನು ನೆಚ್ಚಿಕೊಂಡವರೇ ಅಧಿಕ. ಅಷ್ಟು ದೂರ ಏಕೆ ದಕ್ಷಿಣ ಕನ್ನಡದಲ್ಲೇ ತೆಗೆದುಕೊಂಡರೆ ಸರ್ಕಾರಿ ಬಸ್ಸುಗಳನ್ನು ಕೇಳುವವರಿಲ್ಲ! ಖಾಸಗಿ ಬಸ್ಸುಗಳಲ್ಲಿ ಕೇವಲ 5 ರೂಗಳಲ್ಲಿ ಮಂಗಳೂರಿನಿಂದ ಉಡುಪಿಗೆ ಪಯಣಿಸಬಹುದಾದರೆ, ಸರ್ಕಾರಿ ಬಸ್‌ಗಳಲ್ಲಿ ಈ ಪ್ರಯಾಣಕ್ಕೆ 12ರೂ ತೀಡಬೇಕು! ಖಾಸಗಿ ಬಸ್‌ಗಳಲ್ಲೇ ಪೈಪೋಟಿಯೂ ಇರುವುದರಿಂದ ಸಮಯ ಪಯಣಿಗರ ಬಗ್ಗೆ ಇನ್ನಿಲ್ಲದಷ್ಟು ಕಾಳಜಿಯನ್ನೂ ತೋರುತ್ತಾರೆ ಹೀಗಿರುವಾಗ ಯಾರು ತಾನೆ ಸರ್ಕಾರವನ್ನು ಉದ್ಧಾರ ಮಾಡಲು ಮಾಡಲು ಮುಂದಾಗುತ್ತಾರೆ. ಇಷ್ಟಾದರೂ ಖಾಸಗಿಯವರು ಲಾಭಗಳಿಸುತ್ತಲೇ ಬಂದಿದ್ದಾರೆ, ಹಾಗೆ ಇನ್ನಿಲ್ಲದಷ್ಟು ಖರ್ಚು ವೆಚ್ಚಕ್ಕೆ ಈ ವ್ಯವಸ್ಥೆ ಕಾರಣವಾಗಿದಿದ್ದರೆ ಈ ವ್ಯವಸ್ಥೆಯನ್ನೇ ಬಿಡುತ್ತಿದ್ದರು. ಈಗ ಅದನ್ನು ಸಹಿಸದೆ ಸರ್ಕಾರಕ್ಕೆ ರಾಷ್ಟ್ರೀಕರಣ ಮಾಡುವ ಹಂಚಿಕೆ ಹೂಡಿದೆ.

ಈಗಿನ ಸೌಲಭ್ಯಗಳನ್ನು ಪಡೆಯುತ್ತಿರುವವರು ನಾಗರಿಕರಲ್ಲ. ಸಂಸ್ಥೆ ಪ್ರಯಾಣಿಕರೊಂದಿಗೆ ಸೌಜನ್ಯಯುತ ನಡವಳಿಕೆ ತೋರಬೇಕೆಂಬುದನ್ನೇ ಮರೆತ ಸಿಬ್ಬಂದಿವರ್ಗ ಮತ್ತೆ ಅದಕ್ಕೆ ಬೆಂಬಲ ನೀಡುವ ಪ್ರಮುಖರು ತೀರ ಕ್ಷುಲ್ಲಕ ಕಾರಣಕ್ಕೂ ದಿಢೀರ್ ಮುಷ್ಕರ ಹೂಡುವುದು ಪ್ರಯಾಣಿಕರ ಮೇಲೆ ದೌರ್ಜನ್ಯ ನಡೆಸುವುದು......ಇತ್ಯಾದಿಗಳು ಅವರ ಹಿರಿಮೆ ಗರಿಮೆಗಳಾಗಿಟ್ಟಿವೆ. ಮಿತಿಮೀರಿದ ವೇಗ ಬೇಜವಾಬ್ದರಿ, ಉದ್ಧಟತನಗಳಿಂದ ಅಪಘಾತವೆಸಗಿ ಪಯಣಿಕರನ್ನು ದೂರದ ಲೋಕಕ್ಕೆ ಕಳುಹಿಸುವ ಕೃಪೆ ತೋರುವ ನಿರ್ವಾಹಕರನ್ನು ಎಷ್ಟು ನೆನೆಸಿದರೂ ಸಾಲದು. ಇಷ್ಟೆಲ್ಲ ಅದಕ್ಷತೆಗಳನ್ನು ಸರಿಪಡಿಸಿಕೊಳ್ಳದೇ ‧ ಮತ್ತು ನಾಗರೀಕರನ್ನೇ ಸುಲಿಯುವ ಧೈರ್ಯ ಮಾಡಿರುವ ಸಂಸ್ಥೆಯ ಧೈರ್ಯವೇ ಧೈರ್ಯ!

ಹೀಗೆ ಯಾವುದೇ ರೀತಿಯಿಂದ ನೋಡಿದರೂ ಸಂಸ್ಥೆ ಪ್ರಥಮದಲ್ಲಿ ತನ್ನ ದೌರ್ಬಲ್ಯವನ್ನು ಸರಿಪಡಿಸಿಕೊಂಡು ಜನರ ವಿಶ್ವಾಸಗಳಿಸಬೇಕು. ಜರಡಿಯಲ್ಲಿರುವ ತೂತುಗಳನ್ನು ಮುಚ್ಚಲು ಪ್ರಯತ್ನಿಸಬೇಕು ಇಲ್ಲವಾದರೆ ಬೆಲೆಯನ್ನು ಮಾತ್ರ ಏರಿಸುತ್ತ ಹೋದರೆ ವಿದ್ಯಾವಂತ ನಾಗರೀಕರೂ ದರದ ತೀವ್ರತೆ ಪಡೆದುಕೊಳ್ಳಲಾಗದೆ ಟಿಕೆಟ್‌ರಹಿತ ಪ್ರಯಾಣಿಕರ ಸಾಲಿಗೆ ಸೇರಿ ತಮ್ಮ ದುಡ್ಡನ್ನೂ ಉಳಿಸಿ ಕಂಡಕ್ಟರ್‌ಗಳ ಜೇಬನ್ನೂ ಭರ್ತಿ ಮಾಡಲು ಪ್ರೋತ್ಸಾಹಿಸಿದಂತೆ ಆಗುತ್ತದೆ. ಸಾರಿಗೆಯ ಸೋರಿಕೆ ದೊಡ್ಡದಾಗುತ್ತಲೇ ಹೋಗುತ್ತದೆ ' ಬುಟ್ಟಿಯಿಂದ ಸಮುದ್ರದ ನೀರನ್ನು ಖಾಲಿಮಾಡಲು ' ಹೊರಟ ಮೂರ್ಖನಂತಾಗುತ್ತದೆ ಸರ್ಕಾರದ ವರ್ತನೆ ಅಷ್ಟೇ.

ಮಾಡಿ ಕಾರ್ಖಾನೆಯೊಂದರಲ್ಲಿ ದುಡಿಯುವ ಸರೋಜಮ್ಮ ಬಸ್‌ದರ ಹೆಚ್ಚಿದಂದಿನಿಂದ ಖಾಸಗೀ ಬಸ್‌ಗಾಗಿ ಕಾಯುತ್ತಾರೆ. ಉಸಿರಾಡಲು ಜಾಗವಿಲ್ಲದಿದ್ದರೂ, ೧ರೂ. ಉಳಿಯುತ್ತದೆಂಬ ಲೆಕ್ಕಾಚಾರದಲ್ಲಿ ಅದಕ್ಕೆ ಕಾಯ್ದು ನಿಂತುಕೊಂಡೇ ಹೋಗುತ್ತಾರೆ. ಪುನಃ ಅದೇ ಬಸ್ಸನ್ನು ಹಿಡಿದು ಮನೆಗೆ ಬರುತ್ತಾರೆ, ಆ ನಂತರವೇ ಕಾಫಿ ಮಾಡಿಕೊಂಡು ಕುಡಿಯುವರೇ ವಿನಃ ಹೊರಗೆ ಹಣ ವ್ಯಯಿಸುವುದಿಲ್ಲ.

ಬೆಳಕು ಹರಿಯುವುದಕ್ಕೆ ಮೊದಲು ಗಂಡ, ಮಕ್ಕಳು ಬೆಚ್ಚಗ ಮಲಗಿರುವಾಗ, ನಂಜಮ್ಮ ಟೊಮೊಟೊ ಬುಟ್ಟಿಯನ್ನು ಹೊತ್ತು ಸುಮಾರು ೭-೮ ಕಿ. ಮೀ. ದೂರ ಮನೆ ಮನೆಗ ಹೋಗಿ ಟೊಮೋಟೊ ಮಾರಿ ಬರುತ್ತಾಳೆ. ಬಸ್ ಛಾರ್ಜಿಗೆ ಸುಮಾರು ೪ ರಿಂದ ೫ರೂ. ಖರ್ಚು ಮಾಡುವ ನಂಜಮ್ಮ ಹಸಿವಿನಿಂದ ಇದ್ದರೂ ಕಾಫಿ, ಟೀ ಹೊರಗೆ ಕುಡಿಯುವುದಿಲ್ಲ. ಒಂದು ಕಾಫಿ ಕುಡಿದರೆ, ೧ರೂ. ತಿಂಗಳಿಗೆ ೩೦ರೂ. ಬರುವ ಲಾಭವೆಲ್ಲ ಹಾಗೆ ಹೋಗಿ ಬಿಡುತ್ತದೆ. ಮನೆಗೆ ಬಂದೆ ಏನಾದರೂ ತಿನ್ನುತ್ತೇನೆ ಎನ್ನುತ್ತಾಳೆ.

ನಂಜಮ್ಮನಿಗೆ ಹಸಿವಾಗುವುದಿಲ್ಲವೆ? ಹೊರಗಡೆ ಮನೆ ಮನೆಗಳಿಗೆ ಸುತ್ತಿ ಕೂಗಿಕೊಂಡು ತರಕಾರಿ ಮಾರಿದಾಗ ದಾಹವುಂಟಾದರೆ, ನೀರು ಕುಡಿದು ತೃಪ್ತಿಪಡಬೇಕೆ! ೧ರೂ. ಕೊಟ್ಟು ಕಾಫಿ ಕುಡಿದರೆ ತಿಂಗಳಿಗೆ ೩೦ರೂ. ಖರ್ಚಾಗುತ್ತದೆಯೆಂದು, ಅದೇ ಹಣ ಉಳಿದರೆ. ಮಕ್ಕಳಿಗಾಗುತ್ತದೆಯೆಂದು, ಯೋಚಿಸುವುದು ತಪ್ಪೆ? ಅದೇ ಸ್ಥಿತಿಯಲ್ಲಿರುವ ಅವಳ ಗಂಡ, ಅವಳಂತೆ ಯೋಚಿಸಬಲ್ಲನೇ? ಎಂಟಾಣೆಯು, ಒಂದು ರೂ.ನ ಲೆಕ್ಕ ಹಾಕಿ, ಮನೆಗೆ ತರಬಲ್ಲನೆ? ಕಾಫಿ, ಟೀ ಸಿಗರೇಟು, ಬೀಡಿಯ ಖರ್ಚು ಬಾಬ್ತಿನಿಂದ ಹಣ ಉಳಿಸಬಲ್ಲನೆ?

ಇಂತಹವು ಸಾವಿರಾರು ನಿದರ್ಶನಗಳಿವೆ. ಕುಟುಂಬದ ಸದಸ್ಯರೆಲ್ಲರ ಬೇಕು, ಬೇಡಗಳಿಗೆ ಮೊದಲು, ಸ್ತ್ರೀ ಸ್ಪಂದಿಸುವಂತೆ ಅವಳ ವ್ಯಕ್ತಿತ್ವ ರೂಪುಗೊಂಡಿದೆ. ಅವಳ ವ್ಯಕ್ತಿತ್ವ, ವೈಯಕ್ತಿಕತೆ ಕುಟುಂಬದ ಈ ಚೌಕಟ್ಟನಲ್ಲಿ ಮೂಲೆಗುಂಪಾಗಿದೆ ಬಸ್ ದರದಲ್ಲಿ ಉಂಟಾದ ಹೆಚ್ಚಳ ದುಡಿಯುವ ಸ್ತ್ರೀಯರನ್ನು ಇನ್ನಷ್ಟು ನುಗ್ಗಾಗಿಸುತ್ತದೆ, ಹೆಚ್ಚಾದ ಈ ಹೊರೆಯನ್ನು ಸ್ತ್ರೀಯರು ಅಂತಿಮವಾಗಿ ತಮ್ಮ ಮೇಲೆ ಹೇರಿಕೊಳ್ಳುತ್ತಾರೆ. ತಮ್ಮನ್ನು ತಾವು ಶಿಕ್ಷಿಸಿಕೊಳ್ಳುತ್ತಾರೆ.

ಹಸಿವಾಗಿದ್ದರೂ, ಏನೂ ತಿನ್ನದೇ ಇರುವುದು, ಕಾಫಿ, ಟೀ, ಕುಡಿಯದೇ ಅದೇ ಹಣವನ್ನು ಉಳಿಸುವುದು. ಅವಳ ಹೊರಗಿನ ಸೋಶಿಯಲ್ ಬಿಹೇವಿಯರ್ ಮೇಲೆ ನಿರ್ಬಂಧ ಹೇರಿ "ಮನೆ" ಗೆ ಕಟ್ಟಿ ಹಾಕುತ್ತದೆ. ಕೆಲಸದ ಮಧ್ಯ ಬಿಡುವು ತೆಗೆದುಕೊಳ್ಳದೆ, ರಿಲಾಕ್ಸ್ ಮಾಡಿಕೊಳ್ಳದೆ ಸ್ತ್ರೀ ಇತರರೊಂದಿಗೆ ಬೆರಯದೇ ಸದಾ ಕೌಟುಂಬಿಕ ಸಮಸ್ಯೆಯ ಸುತ್ತ ಗಿರಕಿ ಹೊಡೆಯುವಂತಾಗುತ್ತದೆ.

ಇದರೊಂದಿಗೆ ಗೃಹಕೃತ್ಯದ ಬವಣೆ ಅವಳ ಹೆಗಲ

'ಈಯಪ್ಪ ಈಟೊಂದು ರೇಟ್ ದಾಸ್ತಿ ಮಾಡ್ತಾನೆ ಅಂತಾ ಗೊತ್ತಿದ್ರೆ ನಾನು ಎಲೆಕ್ಸನ್‌ನಾಗೆ ಓಟ್ ಹಾಕ್ತಿರ್ನಿಲ್ಲ.' ನಗರದಿಂದ ತರಕಾರಿಗಳನ್ನು ಹಳ್ಳಿಗೆ ತಂದು ಮಾರಾಟ ಮಾಡುವ ಗ್ರಾಮೀಣ ಮಹಿಳೆಯ ಉವಾಚ

ಚುನಾವಣೆಗಳಲ್ಲಿ ದಿನಗೂಲಿ ನೌಕರರಿಗೆ, ಗುತ್ತಿಗೆ ಶಿಕ್ಷಕರಿಗೆ, ಅರೆಕಾಲಿಕ ಅಧ್ಯಾಪಕರುಗಳಿಗೆ, ಅಂಗನವಾಡಿ ಕಾರ್ಯಕರ್ತೆಯರಿಗೆ ಖಾಯಂ ಉದ್ಯೋಗದ ಭರವಸೆನೀಡಿ, ಸರ್ಕಾರಿ ನೌಕರರಿಗೆ ಸೌಲಭ್ಯಗಳನ್ನು ಹೆಚ್ಚಿಸುವ ಆಮಿಷ ನೀಡಿ ನಿರುದ್ಯೋಗದ ಆಶಾಸೌಧ ತೋರಿಸಿ ಅಧಿಕಾರಕ್ಕೆ ಬಂದವರು ಈ ಎಲ್ಲವನ್ನೂ ದೂರಮಾಡಿ, ಮರೀಚಿಕೆಯನ್ನಾಗಿ ಮಾಡುವುದರಿಂದರೊಂದಿಗೆ ಪ್ರಯಾಣದ ಬಿಸಿಯೇರಿಸಿ ಕೃತಕೃತ್ಯರಾಗಿದ್ದಾರೆ. ಎಲ್ಲ ಚುನಾವಣೆಗಳೂ ಮುಗಿದ ಮೇಲೆ ದರ ಏರಿಸದುದು ಸರ್ವರ ಟೀಕೆಗೆ, ನಿಂದೆಗೆ ಪಾತ್ರವಾಗಿದೆ.

ಮೇಲಿದೆ. ತನಗೆ ಹಾಗೂ ದುಡಿಯುವ ಗಂಡನು ಹೋಟೆಲಿನಲ್ಲಿ ತಿಂದು ಹಣ ಪೋಲಾಗದಿರುವಂತೆ, ಮುಂಜಾನೆಯಿಂದ ಸಂಜೆಯವರೆಗೆ ದುಡಿಯುತ್ತಾಳೆ. ಹೊರಗೆ ದುಡಿಯುವುದರೊಂದಿಗೆ, ಬೆಳಿಗ್ಗೆ ಉಪಾಹಾರ ಮಧ್ಯಾಹ್ನದ ಊಟ, ಸಾಯಂಕಾಲ ರಾತ್ರಿ — ಮತ್ತೆ ಬೆಳಗಿನ ಉಪಾಹಾರ ತಯಾರಿಸುವುದು ಅವುಗಳಿಗೆ ಬೇಕಾದುದನ್ನು ಅಂಗಡಿಯಿಂದ ತರುವುದು, ಶುಚಿಗೊಳಿಸುವುದು, ಮತ್ತಿತರ ಗೃಹಕೃತ್ಯದ ಜವಾಬ್ದಾರಿಗಳಲ್ಲಿ ಸ್ತ್ರೀಯ ವ್ಯಕ್ತಿತ್ವವೆನ್ನುವುದು ಮುದುಡಿ ಹೋಗದೇ ಜೀವಂತವಾಗಿರಲು ಸಾಧ್ಯವೆ? ಬಸ್‌ದರದಲ್ಲಿ ಉಂಟಾದ ಹೆಚ್ಚಳ ಅವಳ ಹೆಗಲ ಮೇಲೆ ಹೊರಲಾರದ ಹೊರೆಯನ್ನು ಹೊರಿಸುತ್ತಿರುವುದು ಕಣ್ಣಿಗೆ ರಾಚುತ್ತಿರುವ ಸ್ಥಳವಲ್ಲವೆ?

ಹೆಣ್ಣು ಶಿಶುವಿನ ವರ್ಷದ ನೆನಪಿಗಾಗಿ..-.....

ಬಾಲ್ಯಾವಸ್ಥೆ

"ಒನ್ ಈಸ್ ನಾಟ್ ಬಾರ್ನ್ ಬಟ್ ರಾದರ್ ಬಿಕಮ್ಸ್ ಎ ವುಮನ್" ಬಾಲ್ಯಾವಸ್ಥೆಯಲ್ಲಿ ಕೇವಲ ಒಂದು ಜೀವಿಯಾಗಿರುವ ಮಗು, ನಂತರದ ವರ್ಷಗಳಲ್ಲಿ ತನ್ನನ್ನು ಗಂಡೆಂದೋ, ಹೆಣ್ಣೆಂದೋ ಗುರುತಿಸಿಕೊಂಡು ಸಾಮಾಜಿಕವಾಗಿ ಪ್ರಚಲಿತವಾಗಿರುವ ನಿಯಮಗಳೊಡನೆ ಹೊಂದಿಕೊಂಡು, ತನ್ನ ಅಸ್ತಿತ್ವವನ್ನು ಸ್ಥಾಪಿಸಿಕೊಳ್ಳಲು ಹೋರಾಟ ನಡೆಸುತ್ತದೆ. ಹೀಗೆ ಅಸ್ತಿತ್ವಕ್ಕಾಗಿ ಹೋರಾಡುವ ಹಂತ ಮಗುವಿನ ಹುಟ್ಟಿನೊಡನೆಯೆ ಪ್ರಾರಂಭವಾಗಿದೆ. ಈ ದೆಸೆಯಲ್ಲಿ ಗಂಡುಮಗುವಿಗೆ ತನ್ನ ಹಿರಿತನದ ಪ್ರಜ್ಞೆ ಬೆಳೆಸಿಕೊಳ್ಳಲು, ಹೋರಾಟದ ಪ್ರಜ್ಞೆಯ ತೀವ್ರತೆಯ ಜೊತೆಗೆ ಆತ್ಮಬಲ ಬೆಳೆಸಿಕೊಳ್ಳಲು ಸಹಾಯವಾಗುವ ಪರಿಸರ, ಹೆಣ್ಣು ಮಗುವಿನ ವಿಚಾರದಲ್ಲಿ ತೀರಾ ಕ್ರೂರವಾಗುತ್ತದೆ. ಕೀಳರಿಮೆಯ ಭಾವನೆಯೊಂದಿಗೆ, ಸ್ವತಂತ್ರ ವ್ಯಕ್ತಿತ್ವದ ಕಲ್ಪನೆಯೇ ಇಲ್ಲದೇ ಗಂಡಸರ ಪ್ರಪಂಚದಲ್ಲಿ ಅಡಿಯಾಳಾಗಿ ತನ್ನನ್ನು ಗುರುತಿಸಿಕೊಳ್ಳುತ್ತಾಳೆ ಹೆಣ್ಣು.

ಯಾವೊಂದು ದೈಹಿಕ ರಚನೆಯಾಗಲೀ, ಮಾನಸಿಕ ಕಾರಣಗಳಾಗಲೀ, ಅಥವಾ ಆರ್ಥಿಕ ಪ್ರಭೇದಗಳಾಗಲೀ ಹುಟ್ಟಿನಿಂದಲೇ ಜೀವಿಯನ್ನು ಹೆಣ್ಣು ಅಥವಾ ಗಂಡೆಂದು ನಿರ್ಧರಿಸುವುದಿಲ್ಲ. ಬದಲಾಗಿ ಸಂಸ್ಕೃತಿ, ನಾಗರೀಕತೆಗಳು ಹೆಂಗಸರನ್ನು ರೂಪಿಸುವಲ್ಲಿ ವಿಶಿಷ್ಟ ಪಾತ್ರ ವಹಿಸುತ್ತಿರುವುದು ಎಲ್ಲಾ ದೇಶಗಳಿಗೂ ಸರ್ವ ವಿದಿತವಾದ ವಿಚಾರ. ಸಮಾನ ಬಲಗಳನ್ನು ಹೊಂದಿ ಉದ್ಭವಿಸುವ ಜೀವಿಗಳಲ್ಲಿ ಗಂಡನ್ನು ಸೃಷ್ಟಿಯಾತ್ಮಕವಾಗಿಯೂ, ಸೃಜನಶೀಲಾತ್ಮಕವಾಗಿಯೂ ರೂಪಿಸುವ ನಾಗರೀಕತೆ, ಹೆಣ್ಣನ್ನು ಅವಲಂಬಿತ ಮನೋಭಾವದ ಕೀಳರಿಮೆಯೊಡನೆ ಗಂಡಿನ ಅಡಿಯಾಳಾಗಿ ಪ್ರಪಂಚದಲ್ಲಿ ಅಡಿ ಇಡುವಂತೆ ರೂಪಿಸುವಲ್ಲಿ ಮಹತ್ತರವಾದ ಪಾತ್ರ ವಹಿಸುತ್ತದೆ. ಜೀವಿಯೊಂದು ಗಂಡು, ಹೆಣ್ಣೆಂದು ಅದು ಹೊಂದಿರುವ ಲೈಂಗಿಕ ಅಂಗಾಂಗಗಳಿಂದ ನಿರ್ಧರಿಸಲ್ಪಡುವುದಿಲ್ಲ. ಏಕೆಂದರೆ ಪ್ರತಿಯೊಂದು ಮಾನವ ಜೀವಿಯೂ ಪ್ರಪಂಚ ಜ್ಞಾನದ ಅರಿವು ಪಡೆಯುವುದು ಅದು ಹೊಂದಿರುವ ಕೈ ಹಾಗೂ ಕಣ್ಣುಗಳಿಂದ.

ಮಾನವ ಜೀವಿಯು ಪ್ರಾರಂಭಿಕ ಚಟುವಟಿಕೆ

ಗಳಲ್ಲಿ ಹೆಣ್ಣು, ಗಂಡೆಂಬ ಪ್ರಭೇಧಗಳು ತೋರುವುದಿಲ್ಲ. ಮೊಲೆ ಕುಡಿಯುವುದರಲ್ಲಿ, ಮುದ್ದಿಸುವುದರಲ್ಲಿ, ಇನ್ನಿತರ ಅನೇಕ ರೀತಿಯ ಚಟುವಟಿಕೆಗಳಲ್ಲಿ, ಸಾಮ್ಯತೆಗಳು ಕಂಡು ಬರುತ್ತದೆ. ಅಷ್ಟೇ ಅಲ್ಲದೆ, ಹೆಣ್ಣು ಮಗು ಮತ್ತು ಗಂಡು ಮಗುವಿನ ರೀತಿಯೇ ಸೃಷ್ಟಾತ್ಮಕ ಭರವಸೆಯನ್ನೇ ತೋರುತ್ತದೆ. ೧೨ ವರ್ಷದವರೆಗೆ ಈ ವಿಭಿನ್ನ ಜೀವಿಗಳಲ್ಲಿ ಗುರುತರವಾದ ವ್ಯತ್ಯಾಸಗಳು ಕಂಡುಬರುವುದಿಲ್ಲ. ೧೨ವರ್ಷದವರೆಗೆ ತನ್ನ ಸಹೋದರನಷ್ಟೆ ಬಲಶಾಲಿಯಾಗಿ ಹೆಣ್ಣು ಗುರುತರವಾದ ಚಟುವಟಿಕೆಗಳನ್ನು ಸೃಷ್ಟ್ಯಾತ್ಮವಾಗಿಯೇ ತೋರಿಸಬಲ್ಲಳು. ಆದರೆ ನಂತರದ ವರ್ಷಗಳಲ್ಲಿ ಉಂಟಾಗುವ ದೈಹಿಕ ಬದಲಾವಣೆಗಳು, ಹಾಗೂ ಈ ಬಗ್ಗೆ ಹಿರಿಯರ, ಸುತ್ತಮುತ್ತಲಿನವರ ನಡತೆಗಳು ಆಕೆಯಲ್ಲಿ ತಟಸ್ಥ ಭಾವನೆಯನ್ನು ಉಂಟುಮಾಡುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ, ಮಗುವಿನಲ್ಲಿ ಉಂಟಾಗುವ ದೈಹಿಕ ಬದಲಾವಣೆಯನ್ನು ಕುಟುಂಬದ ಹಿರಿಯರು, ಸಂಬಂಧಿಗಳು, ಸುತ್ತಮುತ್ತಲಿನ ಜನ, ಹಾಗೂ ಒಟ್ಟಾಗಿ ಸಮಾಜ ಗುರುತಿಸುವ ರೀತಿ. ೧೨ ವರ್ಷಗಳ ನಂತರ ಹುಡುಗನು ಗಂಡೆಂಬ ಹಿರಿತನದ ಪ್ರಜ್ಞೆಯನ್ನು, ಸ್ವಾವಲಂಬಿತನದ ಆಕಾಂಕ್ಷೆಯನ್ನೂ ಗುರುತಿಸಿಕೊಳ್ಳುವಲ್ಲಿ ತನ್ನ ದೈಹಿಕ ಬದಲಾವಣೆಯನ್ನು ಹೆಮ್ಮೆಯಿಂದ ಪ್ರದರ್ಶಿಸಿಕೊಳ್ಳುತ್ತಾನೆ. ಹೀಗೆ ಹೆಮ್ಮೆಗೆ ಕಾರಣವಾಗುವ ಗಂಡಸಿನ ದೈಹಿಕ ಬದಲಾವಣೆಯ ಮನೋಭಾವ ಹೆಣ್ಣಿಗೆ ಇರುವುದಿಲ್ಲ. ಚಿಗುರುವ ಮೀಸೆ, ಬೆಳೆಯುವ ದಾಡಿ, ಅಂಗಾಂಗಳಲ್ಲಿ ಬೆಳೆಯುವ ರೋಮ ಗಂಡಸಿನ ಈ ದೈಹಿಕ ಬದಲಾವಣೆಯಲ್ಲಿ ಮಾನಸಿಕ ವೇದನೆಗೆ ಕಾರಣವಾಗಬಹುದಾದ ಯಾವ ನೋವೂ ಇರುವುದಿಲ್ಲ. ಆದರೆ ಹೆಣ್ಣು ಮಗು ಗಂಡಸಿನಷ್ಟು ಸಹಜವಾಗಿ ತನ್ನ ಬೆಳವಣಿಗೆಯನ್ನು ಸ್ವೀಕರಿಸುವುದಿಲ್ಲ.

ಪ್ರತಿಯೊಬ್ಬ ಹೆಣ್ಣಿಗೂ ತನ್ನಲ್ಲಿ ಉಂಟಾಗುವ ದೈಹಿಕ ಬದಲಾವಣೆಯ ಬಗ್ಗೆ ಒಂದು ರೀತಿಯ ನಾಚಿಕೆ ಹಾಗೂ ಸಂಕೋಚಗಳಿರುತ್ತವೆ. ಪ್ರತಿಯೊಂದು ಹೆಣ್ಣುಮಗುವೂ ಪ್ರಾರಂಭದಲ್ಲಿ ತನ್ನ ಎದೆಯಭಾಗದ ಬೆಳವಣಿಗೆಯ ಬಗ್ಗೆ ಸಂಕೋಚಯುತ ನಾಚಿಕೆಯ ಭಾವನೆಯನ್ನು ಹೊಂದಿರುತ್ತದೆ. ಹೀಗೆ ಬೆಳವಣಿಗೆಯನ್ನು ಸ್ವೀಕರಿಸುವಲ್ಲಿ ಸಹಜತೆಯ ಮನೋಭಾವ ಹೊಂದಿರದ ಹೆಣ್ಣಿನಲ್ಲಿ, ಬೇರೆಡೆ ವರ್ತಿಸುವಾಗಲೆಲ್ಲಾ ಈ ಸಂಕೋಚ ನಾಚಿಕೆಗಳು ತಲೆ ಹಾಕಿ, ಆಕೆ ಮುಕ್ತ ವಾತಾವರಣದಲ್ಲೂ ಮುಕ್ತವಾಗಿ ವರ್ತಿಸದೇ ತನ್ನ ಸ್ವ-ಪ್ರತಿಷ್ಠೆಯ ಒಳಗೇ ಮರೆಯುತ್ತಾಳೆ.

ಇವರನ್ನು ಬೆಳೆಯಿಸುವ ರೀತಿಯಲ್ಲಿ ಸ್ಪಷ್ಟವಾದ ವ್ಯತ್ಯಾಸಗಳು ಕಂಡುಬರುತ್ತವೆ. ಪ್ರಪಂಚದಲ್ಲಿ ಆತ ಕ್ರಿಯಾಶೀಲನಾಗಿ ತೊಡಗುವುದರ ಬಗ್ಗೆ, ಸೃಜನಶೀಲಾತ್ಮಕತೆಯ ಬಗ್ಗೆ ಆತನ ಪ್ರಜ್ಞೆ ಜಾಗೃತವಾಗುವಂತೆ ಮಾಡುತ್ತಾರೆ. ಗಂಡು ಮತ್ತು ಹೆಣ್ಣು ಮಗುವಿನಲ್ಲಿ ಉಂಟಾಗುವ ಮನೋಭಾವವೆಂದರೆ, ಗಂಡು ಮಗುವಿಗೆ "ತಾನೇನೋ ಸಾಧಿಸಲ್ಪಡುವುದಿದೆ" ಎಂಬ ಹಿರಿತನದ ಪ್ರಜ್ಞೆ,ವಿರುದ್ಧವಾಗಿ ಹೆಣ್ಣಿಗೆ "ತಾನು ಇತರರಿಗಾಗಿ" "ಇತರರನ್ನು ಸಂತೋಷಪಡಿಸುವುದೇ ತನ್ನ ಕರ್ತವ್ಯ" ಎಂಬ ಗುಲಾಮಿತನದ ಪ್ರಜ್ಞೆ.

೧೨ ವರ್ಷದ ನಂತರ ಈಕೆ "ತಟಸ್ಥ" ಅಥವಾ ನಿರ್ಜೀವ ವಸ್ತುವಾಗಿ ಬಿಡುವುದು. ಆದರೆ ಬದಲಾದ ಪ್ರಜ್ಞೆಯ ಅವಶ್ಯಕತೆ ಈಕೆಯಲ್ಲಿಯೂ ಇರುವುದರಿಂದ ಇದು ಯಾವ ರೀತಿ ಈಕೆಯಲ್ಲಿ ರೂಪುಗೊಳ್ಳುತ್ತದೆ ಎಂಬುದನ್ನು ಗೊಂಬೆಯ ಆಟಿಕೆಯ ಉದಾಹರಣೆಯಿಂದ ಸ್ಪಷ್ಟಪಡಿಸಬಹುದಾಗಿದೆ. ಹೆಣ್ಣು ಗೊಂಬೆಯೊಡನೆ ಸಹಜವಾಗಿ ಆಡುವ ಹೆಣ್ಣು ಮಗು ಅದನ್ನು ಶೃಂಗರಿಸುವುದರ ಮೂಲಕ, ಮೊಲೆಯೂಡಿಸುವ ಆಟವಾಡಿಸುವುದರ ಮೂಲಕ ಅಡಿಗೆ ಆಟವಾಡುವುದರ ಮೂಲಕ ತನ್ನ ಅಸ್ತಿತ್ವ ಗುರುತಿಸಿಕೊಳ್ಳಲು ಪ್ರಯತ್ನಿಸುತ್ತದೆ. ಮಗು ಹಾಗೂ ಗೊಂಬೆಯ ಸಂಬಂಧ ಮಗುವಿನ ಮನಸ್ಸಿನಲ್ಲಿ ಅಗಾಧವಾದ ಪ್ರಭಾವವನ್ನು ಬೀರುತ್ತದೆ. ತಾಯಿ ತನ್ನ ಹೆಣ್ಣು ಮಗುವಿನ ವಿಚಾರದಲ್ಲಿ ತೀರಾ ವಿರುದ್ಧವಾದ ನಡತೆಗಳನ್ನು ತೋರಿಸುತ್ತಾಳೆ. ತನ್ನ ಮಗುವನ್ನು ಒಳ್ಳೆಯ "ಹೆಂಗಸಾಗಿ" ಮಾಡಿದಲ್ಲಿ, ಆಕೆಗೆ ಸಮಾಜದಲ್ಲಿ ಸ್ಥಾನ ಸುಲಭವಾಗಿ ಸಿಗುವುದರಿಂದ ಈ ಬಗ್ಗೆ ತೀವ್ರವಾಗಿ ಕಾಳಜಿ ವಹಿಸುತ್ತಾಳೆ. ಅಡಿಗೆ ಹೊಲಿಗೆ, ಮನೆಯ ಒಳ ವ್ಯವಹಾರಗಳು, ಬಟ್ಟೆ ಬಗ್ಗೆ ಆಸ್ಥೆ, ಕೇಶ ಸೌಂದರ್ಯದ ಬಗ್ಗೆ ಕಾಳಜಿ ವಹಿಸುವಂತೆ ರೂಪಿಸಿ ಹೆಣ್ಣು ಮಗುವಿನ ಭವಿಷ್ಯದ ಪಾತ್ರದ ಸ್ಪಷ್ಟ ಅರಿವು ನೀಡುತ್ತಾಳೆ.

ಮೂಲ: ಸಿಮನ್ನದಿ ಬುವಾ.

ಸಾಹಸಿ ಪ್ರಕೃತ

ವೇದ.

ಮಧುಪುರಿ ಎಂಬ ರಾಜ್ಯದಲ್ಲಿ ಒಬ್ಬ ರಾಜನಿದ್ದ. ಅವನಿಗೆ 6 ಜನ ಗಂಡು ಮಕ್ಕಳು ಜನಿಸಿದ ನಂತರ ಹೆಣ್ಣುಮಗು ಜನಿಸಿತು. ಮಗು ಹುಟ್ಟಿದ ಘಳಿಗೆ ಸರಿಯಿಲ್ಲವೆಂದು, ಇದರಿಂದ ರಾಜ್ಯಕ್ಕೆ ಕೇಡು ಉಂಟಾಗುತ್ತದೆಯೆಂದು ಪಂಡಿತರು ರಾಜನಿಗೆ ತಿಳಿಸಿದರು. ಮಗುವಿಗೆ 7 ವರ್ಷ ತುಂಬುವುದರೊಳಗೆ ಕಾಡಿಗೆ ಬಿಡಬೇಕು ಇಲ್ಲದಿದ್ದರೆ ತಾನೇ ಕಾಡಿನ ಪಾಲಾಗುತ್ತದೆಂದು ಭವಿಷ್ಯ ನುಡಿದರು.

ಹೆಣ್ಣು ಮಗುವಿನ ಭವಿಷ್ಯದ ಬಗ್ಗೆ ಮನೋವ್ಯಥೆಯಿಂದ ನರಳಿ, ಕೊರಗಿ ರಾಜರಾಣಿಯರಿಬ್ಬರೂ ಕಾಲವಾದರು. ಆಗ ಮಗುವಿಗೆ ಐದು ವರ್ಷವಾಗಿತ್ತು. ಕಾಡಿನ ಪಾಲಾಗುವ ಮಗು 'ಪ್ರಕೃತ' ಎಂದು ಹೆಸರಿಟ್ಟಿದ್ದರು. ಅಣ್ಣನ ಹೆಂಡತಿಯರು ಈ ಮಗುವನ್ನು ಬಹಳ ಕಷ್ಟಕ್ಕೆ ಗುರಿಮಾಡಿದರು, 'ನೀನು ಪ್ರಕೃತಿಯಲ್ಲ ಪಿಶಾಚಿ'ಯೆಂದು ಹೀಯಾಳಿಸಿ, ತಮ್ಮ ಮಕ್ಕಳೊಂದಿಗೆ ಆಟವಾಡಲು ಬಿಡುತ್ತಿರಲಿಲ್ಲ.

ಒಂದು ದಿನ ರಾತ್ರಿ, ಅತ್ತಿಗೆಯರು ಕೊಡುವ ಕಿರುಕುಳವನ್ನು ನೆನೆದು ಅಳುತ್ತಾ ಪ್ರಕೃತ ಹಾಗೇ ನಿದ್ದೆಹೋದಳು. ಅವಳ ಕನಸಿನಲ್ಲಿ ಬಂದ ತಾಯಿ, 'ಮಗು ನೀನು ಇನ್ನು ಇಲ್ಲಿ ಇರಬೇಡ, ನಿನ್ನ ಅತ್ತಿಗೆಯರು ನಿನ್ನನ್ನು ಅಡಿಗಡಿಗೆ ನೋಯಿಸುವರು. ಬೆಳಗಾಗುವುದರೊಳಗೆ ಅರಮನೆಯಿಂದ ಉತ್ತರ ದಿಕ್ಕಿಗೆ ನಡೆದುಕೊಂಡು ಹೋಗು, ಅಲ್ಲಿರುವ ಮರದ ಕೆಳಗೆ ಸಾಧು ಪುರುಷರೊಬ್ಬರಿರುತ್ತಾರೆ. ಅವರ ಬಳಿ ನಿನ್ನ ಕಷ್ಟ ಹೇಳಿಕೋ, ಅವರು ನಿನ್ನನ್ನು ಕಾಪಾಡುತ್ತಾರೆ' ಎಂದು ಹೇಳಿ ಮರೆಯಾಗಿ ಹೋದಳು.

ಪ್ರಕೃತಿಗೆ ಎಚ್ಚರವಾದಾಗ ಆಶ್ಚರ್ಯವಾಯಿತು. ತಾಯಿಯ ಆದೇಶದಂತೆ ಉತ್ತರ ದಿಕ್ಕಿಗೆ ನಡೆದು, ಆಲದ ಮರದ ಕೆಳಗೆ ಜಪಿಸುತ್ತಾ ಕುಳಿತ ಸಾಧುವನ್ನು ಕಂಡಳು. ಪ್ರಕೃತಳನ್ನು ಕಂಡ ಸಾಧು, 'ಬಂದೆಯಾ ಮಗು ಬಾ' ಎಂದು ಕರೆದು ತಲೆಯ ನೇವರಿಸಿದ. ಪ್ರಕೃತಳ ಕಣ್ಣಲ್ಲಿ ನೀರು ತುಂಬಿದವು. ಸಾಧು, "ನೀನು ಯೋಚಿಸಬೇಡ. ನಿನ್ನನ್ನು ಕಷ್ಟಕ್ಕೆ ಗುರಿಮಾಡಿದವರು ನಿನ್ನ ಅತ್ತಿಗೆ ಅಣ್ಣಂದಿರು, ನಿನ್ನನ್ನು ಕಾಡುಪಾಲು ಮಾಡಲು ಸುಳ್ಳು ಜಾತಕ ಬರೆಸಿ, ಈ ನಾಟಕ ಆಡಿದ್ದಾರೆ. ನಾನು ನಿನಗೆ ಸಹಾಯ ಮಾಡುತ್ತೇನೆ." "ಏಕೆ ತಾತ ಹಾಗೆ ಮಾಡಿದರು" ಎಂದು ಪ್ರಕೃತ ಮುಗ್ಧತೆಯಿಂದ ಕೇಳಿದಳು. ಅದಕ್ಕೆ ಸಾಧು, "ಹೌದಮ್ಮ ನೀನು ಅವರೂ ಪಕ್ಕೆ ಹುಟ್ಟಿದ ಒಬ್ಬಳೇ ಹೆಣ್ಣುಮಗಳು. ರಾಜನು ಎಲ್ಲಿ ತಮ್ಮನ್ನು ಕಡೆಗಣಿಸುವನೋ ಎಂಬ ಭಯದಿಂದ ಹೀಗೆ ಮಾಡಿದರು."

"ನಾನು ಒಂದು ಕಷ್ಟದ ಕೆಲಸ ಹೇಳುತ್ತೇನೆ. ಅದನ್ನು ಮಾಡಿದರೆ ಮುಂದೆ ನಿನಗೆ ಸುಖ ಲಭಿಸುವುದು ಮಾಡುತ್ತಿಯಾ?" ಎಂದು ಸಾಧು ಕೇಳಿದಾಗ, ಪ್ರಕೃತ ಅದು ಎಷ್ಟೇ ಕಷ್ಟದ ಕೆಲಸವಾಗಲೀ ಮಾಡುತ್ತೇನೆಂದು ಉತ್ತರಿಸಿದಳು. "ಆಯಿತು ಮಗು. ಇಲ್ಲಿಂದ ನೇರವಾಗಿ ನಡೆದುಹೋಗು. ಅಲ್ಲಿ ಒಂದು ಒಂಟಿ ಮಾವಿನ ಮರ ಸಿಗುತ್ತದೆ. ಅಲ್ಲಿಂದ ಬಲಕ್ಕೆ ತಿರುಗು. ಸ್ವಲ್ಪ ದೂರ ಹೋದ ಮೇಲೆ ಒಂದು ಕೆಂಪು ಹೂಗಳ ತೋಟ ಸಿಗುತ್ತದೆ. ಅಲ್ಲಿ ನೀನು ಇರಬೇಕು. ದಿನವೂ ತೋಟವನ್ನು ಗುಡಿಸಿ ಚೊಕ್ಕಟವಾಗಿಡಬೇಕು. ಆ ತೋಟದ ನಡುವಿನಲ್ಲಿ ಒಂದು ಕೊಳವಿದೆ. ಅದರಲ್ಲಿ ಪ್ರತಿದಿನವೂ ನಿನ್ನ ಮುಖವನ್ನು ನೋಡಿಕೊಳ್ಳಬೇಕು. ಆದರೆ ನೀನು ಹೆದರಬಾರದು. ಹೆದರಿ ಏನಾದರು ನಿನ್ನ ಗುಂಡಿಗೆ ಹೊಡೆದು ಕೊಂಡರೆ ಅಲ್ಲಿಯೇ ಸಾಯುತ್ತೀಯ. ನಾನು ಒಂದು ಚಾಕುವನ್ನು, ರುದ್ರಾಕ್ಷಿಯನ್ನು ಕೊಡುತ್ತೇನೆ. ರುದ್ರಾಕ್ಷಿಯನ್ನು ಬಾಯಿಯಲ್ಲಿ ಇಟ್ಟುಕೊಳ್ಳಬೇಕು, ಚಾಕುವನ್ನು ಕ್ರೂರಪ್ರಾಣಿಗಳನ್ನು ಕೊಲ್ಲಲು ಉಪಯೋಗಿಸಬೇಕು" ಎಂದು ಹೇಳಿದನು.

ಸಾಧುಗೆ ವಂದಿಸಿದ ಪ್ರಕೃತಳು ಎರಡು ರಾತ್ರಿ ಎರಡು ಹಗಲು ಸತತವಾಗಿ ನಡೆದು ಹೂವಿನ ತೋಟ ತಲುಪಿದಳು. ಸಂತೋಷದಿಂದ ಒಳಗೆ ಕಾಲಿಟ್ಟ ಕೂಡಲೇ ಬಿರುಗಾಳಿ ಬೀಸಲಾರಂಭಿಸಿತು. ಪ್ರಕೃತ ಮರದ ಕಾಂಡವನ್ನು ಮುರಿದು ಗಾಳಿಗೆ ಅಡ್ಡವಾಗಿ ಹಿಡಿದಳು. ತತ್‌ಕ್ಷಣ ಗಾಳಿ ನಿಂತು ಹೋಯಿತು. ತೋಟವನ್ನು ಸುತ್ತಾಡಿ, ಮರದ ಎಲೆಗಳಿಂದ ಪೊರಕೆ ಮಾಡಿ ತೋಟವನ್ನು ಸ್ವಚ್ಛವಾಗಿ ಗುಡಿಸಿದಳು.

17ನೇ ಪುಟ ನೋಡಿ

ಭೈರಪ್ಪನವರ ನಾಲ್ಕು ಕೃತಿಗಳಲ್ಲಿನ ಸ್ತ್ರೀ ಪಾತ್ರಗಳು

(ಗೃಹಭಂಗ, ದಾಟು, ಸಾಕ್ಷಿ, ನೆಲೆ)

– ಶೈಲಜಾ ಕೆ. ಪಿ.

ಶ್ರೀಯುತ ಎಸ್. ಎಲ್. ಭೈರಪ್ಪನವರು ತಮ್ಮ ಅನೇಕ ಕಾದಂಬರಿಗಳಲ್ಲಿನ ತಾತ್ವಿಕ ವಿಚಾರಗಳಿಂದ ಸಾಹಿತ್ಯ ವಲಯದಲ್ಲಿ ಚರ್ಚೆಯ ಅಲೆಯನ್ನೇ ಎಬ್ಬಿಸಿದವರು. ಇಲ್ಲಿ ನಾನು ಅವರ ಸಾಹಿತ್ಯದ ವಿಮರ್ಶೆಗೆ ತೊಡಗುವ ಸಾಹಸ ಮಾಡುತ್ತಿಲ್ಲ. ಅವರ ಬಹು ವಿಸ್ತಾರವಾದ ಕಾದಂಬರಿ ಪ್ರಪಂಚದಿಂದ ಮೇಲೆ ಕಾಣಿಸಿದ ನಾಲ್ಕು ಕಾದಂಬರಿಗಳನ್ನು ಮಾತ್ರ ಆಯ್ದುಕೊಂಡು ಅವುಗಳಲ್ಲಿ ಬರುವ ಮುಖ್ಯ ಸ್ತ್ರೀ ಪಾತ್ರಗಳ ವ್ಯಕ್ತಿತ್ವ ಚಿತ್ರಣವನ್ನು ಅವಲೋಕಿಸುವುದಷ್ಟೇ ಇಲ್ಲಿ ನನ್ನ ಕೆಲಸ. ಕಥೆಯ ಹಂದರದಿಂದ ಕೆಲವು ಪಾತ್ರಗಳನ್ನು ಮಾತ್ರ ಪ್ರತ್ಯೇಕಿಸಿ ಅವಲೋಕಿಸುವುದು ಸಾಹಿತ್ಯಕ ದೃಷ್ಟಿಯಿಂದ ಸಾಧುವಲ್ಲ ನಿಜ. ಆದರೆ ಸಾಹಿತ್ಯ ಒಂದು ಕಾಲದ ಮೌಲ್ಯಗಳನ್ನು ಒಳಗೊಂಡು ಲೇಖಕನ ಸೂಕ್ಷ್ಮ ಸಂವೇದನೆಯಲ್ಲಿ, ಕಲ್ಪನೆಯಲ್ಲಿ ಪೂರ್ಣರೂಪ ಪಡೆದು ಹೊರ ಬರುವಂತಹದು. ವ್ಯಕ್ತಿ ಮತ್ತು ಸಮಾಜದ ಜೀವನ ಕ್ರಮಕ್ಕೆ ಆಧಾರವಾಗಿರುವ ಮೌಲ್ಯಗಳು ಜೀವನ ಕ್ರಮ ಬದಲಾದಂತೆ ಪ್ರಶ್ನಿಸಲ್ಪಡುತ್ತವೆ. ಸಂಘರ್ಷಕ್ಕೆ ಒಳಗಾಗುತ್ತವೆ. ಸಮಾಜದಲ್ಲಿ ಶೋಷಿತಳಾದ ಸ್ತ್ರೀ ಇಂದು ತನ್ನ ಅಸ್ತಿತ್ವ ಗುರುತಿಸಿಕೊಳ್ಳಲು ಇಂತಹ ಪರಂಪರಾಗತವಾಗಿ ಬಂದ ಕೆಲವು ಮೌಲ್ಯಗಳನ್ನು ಪ್ರಶ್ನಿಸುತ್ತಾಳೆ. ಈ ದೃಷ್ಟಿಯಲ್ಲಿ ಜನಜೀವನದಿಂದಲೇ ಮೂಡಿಬಂದ ಸಾಹಿತ್ಯದಲ್ಲಿ ಸೃಷ್ಟಿಯಾದ ಸ್ತ್ರೀ ಪಾತ್ರಗಳೂ ಕೂಡ ಹಲವಾರು ಪ್ರಶ್ನೆಗಳನ್ನೆತ್ತುವುದರಿಂದ ಅವುಗಳ ಅವಲೋಕನ ಪ್ರಸ್ತುತ ಕಾಲಕ್ಕೆ ಅವಶ್ಯವೆಂದು ನನ್ನ ಅನಿಸಿಕೆ.

ಗೃಹಭಂಗ — ಭೈರಪ್ಪನವರ ಕಾದಂಬರಿಗಳಲ್ಲಿ ಸ್ವತಂತ್ರ ಪೂರ್ವದ ಜೀವನ ಕ್ರಮವನ್ನು ಒಳಗೊಂಡಿರುವಂತಹದು. ಅಣ್ಣ – ತಮ್ಮಂದಿರಿಬ್ಬರನ್ನು ಒಳಗೊಂಡ ಕುಟುಂಬ ಅವರ ತಾಯಿಯ ಅವಿವೇಕದಿಂದಾಗಿ ಅನೇಕ ತೊಂದರೆಗಳಿಗೆ ಸಿಲುಕಿ ಒಡೆದು ಹೋಗುವ ಕಥಾವಸ್ತುವನ್ನೊಳಗೊಂಡಿರುವಂತಹುದು. ಸಂಸಾರದ ವಿಭಿನ್ನ ತೊಡರುಗಳು ಗಂಡ – ಹೆಂಡತಿ, ತಾಯಿ – ಮಕ್ಕಳ ಸಂಬಂಧ ಹಳ್ಳಿಯ ಜನರ ಜೀವನದಲ್ಲಿ ಬೆಳೆದು ಬಂದ ಪ್ರೀತಿ, ದ್ವೇಷ, ಅಸೂಯೆಗಳ ಮಿಳಿತದಲ್ಲಿ ಒಡಮೂಡಿದ ಈ ಕಾದಂಬರಿಯಲ್ಲಿ ನಮ್ಮ ಮನದಾಳಕ್ಕೆ ಇಳಿಯುವ ಪಾತ್ರ ನಂಜಮ್ಮನದು. ಕಟ್ಟಿಕೊಂಡ ಗಂಡ ಎಂಥವನೇ ಇರಲಿ ಅಲ್ಲಿಯೇ ನಿಂತು ತನ್ನ ಸಂಸಾರವನ್ನು ನಾಲ್ಕು ಜನರಿಂದ ಅನ್ನಿಸಿಕೊಳ್ಳದಂತೆ ನಿಲ್ಲಿಸಬೇಕೆಂಬ ಹಟದ ನಂಜಮ್ಮ ಅಂದಿನ ಸಮಾಜದ ಸ್ತ್ರೀಯರಿಗಿಂತ ಭಿನ್ನವಾಗಿ ನಿಲ್ಲುತ್ತಾಳೆ. ಹಲವು ಮೂಢ ನಂಬಿಕೆಗಳನ್ನು, ಸಾಮಾಜಿಕ ಕಟ್ಟಳೆಗಳನ್ನು ತನ್ನ ಸ್ವಂತ ವಿವೇಕದಿಂದಲೇ ಕೈ ಬಿಡುತ್ತ ಹೋಗುವ ನಂಜಮ್ಮ ಮೊದಮೊದಲು ಸಮಾಜದ ನಿಂದೆಗೆ ಗುರಿಯಾದರೂ ನಂತರ ಆಕೆಯ ಜಾಣ್ಮೆ ಅವರೆಲ್ಲರನ್ನೂ ಗೆಲ್ಲುತ್ತದೆ. ಊರಿನ ಎಲ್ಲ ಜನರ ವಿರೋಧದ ಮಧ್ಯೆಯೂ ಶಾನುಭೋಗಿಕೆ ಲೆಕ್ಕ ಬರೆಯುವ ಧೈರ್ಯ ಮಾಡುವ ನಂಜಮ್ಮ ಸಂಸಾರದ ಎಲ್ಲ ಭಾರವನ್ನೂ ತಾನೇ ಹೊತ್ತುಕೊಳ್ಳುತ್ತಾಳೆ. ತನ್ನ ಹೆಣ್ಣುಮಗಳನ್ನು ಎಲ್ಲರಿಗಿಂತ ಮುಂದಾಗಿ ತಾನೇ ಮೊದಲು ಶಾಲೆಗೆ ಸೇರಿಸುತ್ತಾಳೆ. ರಾಮಸಂದ್ರದಂತಹ ಕುಗ್ರಾಮಕ್ಕೆ ಎಳಸೇ ವಯಸ್ಸಿನಲ್ಲಿಯೇ ಸೊಸೆಯಾಗಿ ಬಂದ ನಂಜಮ್ಮ ತನಗೆ ದೊರೆತ ಮೂರ್ಖ ಗಂಡನಿಂದಾಗಿ ಗಯ್ಯಾಳಿ ಅತ್ತೆಯಿಂದಾಗಿ, ಕಿತ್ತು ತಿನ್ನುವ ಬಡತನದಿಂದಾಗಿ ಹತಾಶೆಗೊಂಡು ತಂದೆಯ ಮನೆಗೆ ಹೋಗುವುದೋ ಅಥವಾ ಆತ್ಮಾಹುತಿ ಮಾಡಿಕೊಳ್ಳುವುದೋ ಕಷ್ಟದ ಕೆಲಸವಾಗಿರಲಿಲ್ಲ. ಒಂದೇ ಒಂದು ಸರಸದ

ಮಾತನ್ನಾಡದ, ದೇಹದ ಹಸಿವೆಗೆ ಮಾತ್ರ ಆಕೆಯನ್ನು ಭೋಗಿಸುವ ದಡ್ಡ ಗಂಡನ ಬಗ್ಗೆ ಚಿಂತಿಸಿ ಫಲವಿಲ್ಲವೆಂದರಿತು ತನ್ನದೇ ಆದ ಕಾರ್ಯಕ್ಷೇತ್ರವನ್ನು ಗುರುತಿಸಿಕೊಂಡು ಆ ಹಳ್ಳಿಗೆ ವಿಶೇಷ ವ್ಯಕ್ತಿಯಾಗಿ ಬೆಳೆಯುತ್ತಾಳೆ. ತನ್ನ ಅನುಭವದ ಮೂಸೆಯಲ್ಲಿ ಪಕ್ವವಾಗುತ್ತ ಹೋಗುತ್ತಾಳೆ. ಆಚಾರ ವಿಚಾರಗಳನ್ನು ತನ್ನಲ್ಲೇ ಪ್ರಶ್ನಿಸಿಕೊಳ್ಳುತ್ತಾಳೆ. ತನಗೆ ತಿಳಿದಂತೆ ಉತ್ತರವನ್ನೂ ಕಂಡುಕೊಳ್ಳುತ್ತಾಳೆ. ತನಗನಿಸಿದಂತೆ ಮಾತ್ರ ಅವುಗಳನ್ನು ಪಾಲಿಸುತ್ತಾಳೆ. ಬ್ರಾಹ್ಮಣ ಸ್ತ್ರೀಯಾದ ಆಕೆ ಮುಟ್ಟಾದಾಗ ಹೊರಗೆ ಕೂರುವುದಿಲ್ಲ. ಮದುವೆಗೆ ಮುನ್ನ ಮಗಳು ಮೈನೆರೆದಾಗ ಜಾಣತನದಿಂದ ಅದನ್ನು ಬಹಿರಂಗಗೊಳಿಸದೆ ಅವಳಿಗೆ ಒಳಗೇ ಆರೈಕೆ ಮಾಡುತ್ತಾಳೆ. ಶೃಂಗೇರಿ ಮಠದಿಂದ ಬಹಿಷ್ಕಾರ ಬಂದಾಗಲೂ ಸ್ವಲ್ಪವೂ ಅಳುಕದೇ ಮಾನವೀಯತೆಯನ್ನೇ ಪ್ರಶ್ನಿಸಿ ಮಠಕ್ಕೆ ಕಾಗದ ಬರೆಯುತ್ತಾಳೆ. ಹೀಗೆ ಹೆಣ್ಣುಮಕ್ಕಳು ಓದುವುದೇ ಸಮಾಜಕ್ಕೆ ಅಪವಾದ ಎನ್ನುವಂತಿದ್ದ ಕಾಲದಲ್ಲಿ ತಂದೆಯಿಂದ ಬಳುವಳಿಯಾಗಿ ಬಂದ ಅಕ್ಷರಜ್ಞಾನ ಮತ್ತು ಹಟಗಳಿಂದಾಗಿ ಎಂತಹ ಜೀವಹಿಂಡುವ ಪರಿಸ್ಥಿತಿಯಲ್ಲಿಯೂ ಅಧೀರಳಾಗದ ನಂಜಮ್ಮನ ಪಾತ್ರ ಅಂತಸ್ಥೈರ್ಯವುಳ್ಳದ್ದು. ಪರಿಪೂರ್ಣವಾದದ್ದು. ಸ್ತ್ರೀಯ ಸಬಲತೆಯನ್ನು ಎತ್ತಿ ತೋರುವಂತಹುದು.

ನಂಜಮ್ಮನ ವ್ಯಕ್ತಿತ್ವಕ್ಕೆ ವಿರೋಧವಾದ ಆಕೆಯ ಓರಗಿತ್ತಿ, ಎಡವಟ್ಟು ಗಂಡನ, ತುತ್ತುಕೂಳಿಗೂ ಕಷ್ಟಪಡಬೇಕಾದ ಬಡತನದ ಬದುಕನ್ನು ತೊರೆದು ಪೇಟೆಯಲ್ಲಿನ ಶ್ರೀಮಂತನೊಬ್ಬನ ಸೂಳೆಯಾಗಿ ಸುಖವನ್ನು ಕಂಡುಕೊಳ್ಳುತ್ತಾಳೆ. ನಂಜಮ್ಮನ ವ್ಯಕ್ತಿತ್ವವನ್ನು ಉನ್ನತ ಮಟ್ಟಕ್ಕೇರಿಸಲು ಮಾತ್ರ ಈ ಪಾತ್ರ ಸಹಾಯಕವಾಗಿರುವಂತೆ ಕಂಡು ಬರುತ್ತದೆ.

ಸ್ವಾರ್ಥವೇ ಮೈವೆತ್ತಂತ ಅತ್ತೆ ಗಂಗಮ್ಮ, ಮಮತಾಮಯಿ ಅಚ್ಚಮ್ಮ ಇನ್ನಿತರ ಸ್ತ್ರೀ ಪಾತ್ರಗಳು ಇವು ಹಳ್ಳಿಯ ಪರಿಸರದಲ್ಲಿನ ಸಹಜ ಸ್ತ್ರೀ ಪಾತ್ರಗಳು.

ದಾಟು — ಎಪ್ಪತ್ತರ ದಶಕದಲ್ಲಿ ಬಂದ ಇವರ "ದಾಟು" ಕಾದಂಬರಿಯ ವಸ್ತು ಅತ್ಯಂತ ಚರ್ಚೆಗೆ ಒಳಗಾದದ್ದು. ಇಲ್ಲಿಯೂ ಸಹ ಮೌಲ್ಯಗಳ ಸಂಘರ್ಷವೇ ಮುಖ್ಯವಾಗಿದ್ದು ಜಾತಿಗಳನ್ನು ಮೀರಿದ ಬ್ರಹ್ಮತ್ವ ಸಾಧನೆಯ ಪ್ರಯತ್ನದ ಫಲಾ-ಫಲಗಳನ್ನು ತೊಡರುಗಳನ್ನು, ಮೌಲ್ಯಗಳ ಬದಲಾವಣೆಯ ಕುಲದದಲ್ಲಿನ ತಿಕ್ಕಾಟವನ್ನು ಚಿತ್ರಿಸಲಾಗಿದೆ. ಕಾದಂಬರಿಯಲ್ಲಿ ವಿಶೇಷವಾಗಿ ಗಮನ ಸೆಳೆಯುವ ಪಾತ್ರ ಸತ್ಯಭಾಮಳದ್ದು. ಮಾತಂಗಿ, ಮೀರಾ ಇನ್ನಿತರ ಪಾತ್ರಗಳು.

"ರೂಢಿ ಅಂತರಂಗಾನ ಮುಚ್ಚಿಹಾಕುತ್ತೆ. ಅನುಭವದ ಅರ್ಥವನ್ನು ಕೈ ತಪ್ಪಿಸುತ್ತೆ. ಧೈರ್ಯವಿದ್ದೋರು ರೂಢೀನ ಗೆಲ್ತಾರೆ. ಗೆದ್ದು ಬದುಕುತ್ತಾರೆ. ಹೇಡಿಗಳು ಮನಸ್ಸಿನ ಮೇಲೆ ಮಣ್ಣುಮುಚ್ಚಿಕೊಂಡು ಮಣ್ಣು ಹುಳುವಿನ ಹಾಗೆ ಜೀವನ ಮಾಡ್ತಾರೆ"
"........ನನ್ನ ಅಂತರಂಗ ಹೇಳಿದ ಹಾಗೆಮಾಡಿ ರೂಢಿಯನ್ನು ಕೆಡವಿದ ಸಂತೋಷ ಸಿಕ್ಕಿದರೆ ಸಾಕು."(ಪುಟ ೪೨) ಸತ್ಯಭಾಮೆಯ ಈ ಮಾತುಗಳೇ ಆಕೆಯ ವ್ಯಕ್ತಿತ್ವವನ್ನು ವಿವರಿಸಬಲ್ಲವು. ಇಲ್ಲಿ ಸಾಮಾಜಿಕವಾಗಿ ಅನೇಕ ಸಮಸ್ಯೆಗಳು ಸಂಕ್ರಮಣ ಕಾಲದಲ್ಲಿದ್ದಾಗ ಗಾಂಧೀವಾದದ ಪ್ರಭಾವ ಜನರಲ್ಲಿ ಹರಿದಾಡುತ್ತಿರುವಾಗ ಶತಮಾನಗಳಿಂದ ಶೋಷಿಸಲ್ಪಟ್ಟವರ್ಗ ತಮ್ಮನ್ನು ತುಳಿದವರನ್ನು ತಾವು ತುಳಿಯಬೇಕೆಂದೂ, ಮೇಲ್ವರ್ಗದವರು ಇತಿಹಾಸವನು, ಶಾಸ್ತ್ರವನ್ನು ಹೇಗಾದರೂ ತಿರುಚಿ ತಮ್ಮ ಸ್ಥಾನವನ್ನು ಕಾಯ್ದುಕೊಳ್ಳಬೇಕೆಂದೂ ವಿಧ ವಿಧವಾದ ಪ್ರಯತ್ನಗಳನ್ನು ಹುಟ್ಟುಹಾಕುತ್ತಿರುವಾಗ, ಮೇಲ್ವರ್ಗ ಮತ್ತು ಕೆಳವರ್ಗ ಎರಡರಲ್ಲೂ ಶೋಷಿತಳಾದ ಸ್ತ್ರೀ ವರ್ಗದಿಂದ ನಾಯಕಿಯನ್ನು ಆಯ್ದುಕೊಂಡದ್ದು ವಿಶೇಷ ಸಂಗತಿ. ಅತ್ಯಂತ ಸಂಪ್ರದಾಯಸ್ಥರ ಮನೆಯಲ್ಲಿ ಹುಟ್ಟಿದ ಸತ್ಯಭಾಮೆ ಚಿಕ್ಕಂದಿನಿಂದಲೂ ರೂಢಿಯನ್ನು ಮುರಿಯುವುದರಲ್ಲಿ ಸಂತೋಷ ಕಾಣುವ ಸ್ವಭಾವದವಳು. ಎಲ್ಲ ಸಂಪ್ರದಾಯಗಳನ್ನು ಪ್ರಶ್ನಿಸುವಂತವಳು. ತಾರುಣ್ಯದಲ್ಲಿ ತನ್ನ ಬಾಲ್ಯಗೆಳೆಯನಾದ ಗೌಡರ ಹುಡುಗ ಶ್ರೀನಿವಾಸನನ್ನು ಮದುವೆಯಾಗುವುದಾಗಿ ತಂದೆಗೆ ತಿಳಿದಾಗ ತಂದೆಯ ಆಕ್ರೋಶ ಚಪ್ಪಲಿ ಹೊಡೆತಗಳ ರೂಪದಲ್ಲಿ ವ್ಯಕ್ತವಾದಾಗ ಅತ್ಯಂತ ಸ್ಥೈರ್ಯದಿಂದ, ಆತ್ಮವಿಶ್ವಾಸದಿಂದ ಅವುಗಳನ್ನು ಸಹಿಸಿಕೊಂಡವಳು. ಶ್ರೀನಿವಾಸನ ದೌರ್ಬಲ್ಯದಿಂದಾಗಿ ವಂಚನೆಗೆ ಒಳಗಾಗುವ ಈಕೆ ಹಳ್ಳಿಗೆ ಹಿಂದಿರುಗಿ ತಂದೆಯ ಬದುಕನ್ನು

ಅರ್ಥಮಾಡಿಕೊಳ್ಳಲು ನಿಲ್ಲುತ್ತಾಳೆ. ತಂದೆಯ ಮನೋವೈಕಲ್ಯದಲ್ಲಿ ಹೊರಬಂದ ಆತನ ಕಾರ್ಯಗಳಲ್ಲಿ, ಮಾತುಗಳಲ್ಲಿ ಜೀವನದ ಸತ್ಯವನ್ನು ಕಂಡುಕೊಳ್ಳುತ್ತಾಳೆ. ತಂದೆ ತನಗೆ ಹಾಕಿದ ಜನಿವಾರವನ್ನು ಕಾಯ್ದುಕೊಂಡು ಮನಶ್ಶಾಂತಿಗಾಗಿ ಎಂಬ ಸಮರ್ಥನೆಯೊಂದಿಗೆ ಹವನ ಹೋಮಗಳನ್ನು ಮಾಡಲು ತೊಡಗುತ್ತಾಳೆ. ರೈತರಂತೆ ಉಳುವ, ಅಗೆಯುವ ಕೆಲಸಮಾಡುತ್ತಾಳೆ. ಈ ಎಲ್ಲ ವಿಶೇಷತೆಗಳಿದ್ದಾಗ್ಯೂ ಸತ್ಯಭಾಮ ನಮಗೆ ಅಪೂರ್ಣ ಎನಿಸುತ್ತಾಳೆ. ಇಲ್ಲಿ ಸತ್ಯಭಾಮೆಯ ಹೋರಾಟ ಜಾತಿ ಮತಗಳ ಬಗೆಗಿನ ಮನುವಿನ ವೇದದಲ್ಲಿರುವ ಅರ್ಥವನ್ನು ತಪ್ಪು ಎಂದು ಅರ್ಥೈಸುವುದರಲ್ಲಿಯೂ ಮತ್ತು ಇತಿಹಾಸದಿಂದ ಅದು ನಡೆದುಕೊಂಡು ಬಂದ ದಾರಿಯನ್ನು ಗುರುತಿಸುವಲ್ಲಿಯೂ ನಡೆಯುತ್ತದೆ. "ಸ್ತ್ರೀ ಕೂಡ ಶೂದ್ರಳೇ, ಬ್ರಾಹ್ಮಣರು ಮೊದಲು ಇತರರನ್ನು ಶೂದ್ರರನ್ನಾಗಿಸಿಕೊಂಡರು, ನಂತರ ತಮ್ಮ ಸ್ತ್ರೀಯರನ್ನು" ಎನ್ನುವ ಆಕೆರಿಂದ ಪಾತ್ರವು ಅಪೂರ್ಣ ಎನಿಸುತ್ತದೆ. ಮಾತಂಗಿ ನಮ್ಮ ಸಮಾಜದಲ್ಲಿರುವಂತಹ ಅತ್ಯಂತ ನಿಮ್ನಯ ಶೂದ್ರ ಹೆಣ್ಣು ತನ್ನ ಸಮಾಜದ ರೀತಿ ನೀತಿಗನುಗುಣವಾಗಿ ಬ್ರಾಹ್ಮಣನೊಬ್ಬನ ಜೊತೆ ಕೂಡಿದ್ದು ಅವನಿಂದ ಮಗು ಪಡೆದದ್ದನ್ನು ಗೌಪ್ಯವಾಗಿಟ್ಟು ಮುಂಬರುವ ಸಮಸ್ಯೆಗಳನ್ನು ಇಲ್ಲವಾಗಿಸುತ್ತಾಳೆ. ಇದೇ ರೀತಿಯಲ್ಲಿ ಇನೊಬ್ಬ ಹರಿಜನ ಹುಡುಗಿ ಮೀರಾ ಸತ್ಯಭಾಮೆಯ ಪ್ರೋತ್ಸಾಹದಿಂದ ಮೇಲ್ಜಾತಿಯ ಶ್ರೀನಿವಾಸನನ್ನು ನಂಬಿ ಪ್ರೇಮಿಸಿ ದೈಹಿಕ ಸಂಬಂದವನ್ನು ಹೊಂದಿದ್ದಾಗ್ಯೂ ಆತನಿಂದ ವಂಚಿತಳಾದಾಗ ಆತ್ಮಹತ್ಯೆ ಮಾಡಿಕೊಂಡು ಸಮಸ್ಯೆಗಳಿಗೆ ಪೂರ್ಣವಿರಾಮ ಹಾಕುತ್ತಾಳೆ ಸತ್ಯಭಾಮೆ ಮೇಲ್ಜಾತಿಯ ಅತ್ಯಂತ ಹೆಚ್ಚಿನ ವಿಲ್ ಪವರ್ ಇರುವ ಸಂಯಮದ ವಿವೇಚನೆಯ ಗಂಭೀರ ಹೆಣ್ಣಾಗಿ ಮೂಡಿದ್ದರೆ ಮೀರಾ ಕೆಳಜಾತಿಯ ಮುಗ್ಧ, ಭಾವುಕ ಹೆಣ್ಣಾಗಿ ಮೂಡಿದ್ದಾಳೆ.

ವ್ಯಕ್ತಿ ಮತ್ತು ಸಮಾಜದ ಜೀವನಕ್ರಮಕ್ಕೆ ಆಧಾರವಾಗಿರುವ ಮೌಲ್ಯಗಳು ಜೀವನ ಕ್ರಮ ಬದಲಾದಂತೆ ಪ್ರಶ್ನಿಸುಸಲ್ಪಡುತ್ತವೆ ಸಂಘರ್ಷಕ್ಕೆ ಒಳಗಾಗುತ್ತವೆ, ಸಮಾಜದಲ್ಲಿ ಶೋಷಿತಳಾದ ಸ್ತ್ರೀ ಇಂದು ತನ್ನ ಅಸ್ತಿತ್ವ ಗುರುತಿಸಿಕೊಳ್ಳಲು ಇಂಥ ಪರಂಪರಾಗತವಾಗಿ ಬಂದ ಕೆಲವು ಮೌಲ್ಯಗಳನ್ನು ಪ್ರಶ್ನಿಸುತ್ತಿದ್ದಾಳೆ ಈ ದೃಷ್ಟಿಯಲ್ಲಿ ಜನಜೀವನದಿಂದಲೇ ಮೂಡಿ ಬಂದ ಸಾಹಿತ್ಯದಲ್ಲಿ ಸೃಷ್ಟಿಯಾದ ಸ್ತ್ರೀ ಪಾತ್ರಗಳೂ ಕೂಡ ಹಲವಾರು ಪ್ರಶ್ನೆಗಳೆನ್ನೆತ್ತುವುದರಿಂದ ಅವುಗಳ ಅವಲೋಕನ ಪ್ರಸ್ತುತ ಕಾಲಕ್ಕೆ ಅವಶ್ಯಕ

ತನ್ನ ಮನಸ್ಸಿನ ಆಳದಲ್ಲೇ ಅಡಗಿರುವ ಶೂದ್ರತ್ವದ ಬಗ್ಗೆ ಚಿಂತಿಸುವುದಿಲ್ಲ. ಇಲ್ಲಿ ಸತ್ಯಭಾಮೆಯ ಯಾವ "ಇನ್‌ಸ್ಟಿಂಕ್ಟ್" ಗಳು ಬಿಚ್ಚಿಕೊಳ್ಳುವುದಿಲ್ಲ. ಆಕೆಯ ಪ್ರತಿಯೊಂದು ವೈಯಕ್ತಿಕ ಘಟನೆಗಳೂ ರಾಜಕೀಯ ಆಯಾಮ ಪಡೆದುಕೊಳ್ಳುತ್ತವೆ. ಆಕೆಯ ಎಲ್ಲ ಕೆಲಸಗಳಿಗೂ ಸೈದ್ಧಾಂತಿಕ ವಿವರಣೆ ಇರುತ್ತದೆ. ಜಾತಿ ಮತಗಳನ್ನು ಮೀರಿದ ಬ್ರಹ್ಮತ್ವ ಸಾಧಿಸಲು ಹೊರಟ ಸತ್ಯಭಾಮೆ ಮಾನಸಿಕವಾಗಿ ಮೇಲ್ವರ್ಗದ ಸ್ತ್ರೀಯಾಗಿಯೇ ಉಳಿದಿರುತ್ತಾಳೆ. ಶ್ರೀನಿವಾಸನೊಂದಿಗೆ ಎಂದಿಗೂ ಎಲ್ಲೆ ಮೀರಿ ವರ್ತಿಸದ, ಕೈ-ಕೈ ಹಿಡಿದುಕೊಂಡು ನಡೆಯುವುದನ್ನೂ ಇಷ್ಟಪಡದ ಸತ್ಯಭಾಮೆ ಮೋಹನದಾಸನ ವರ್ತನೆಗಳು ಕಂಡೂಕಾಣದಂತೆ ನಟಿಸುತ್ತಾಳೆ. ಆದ್ದರಿಂದ ಸತ್ಯಭಾಮೆ ನಮಗೆ ದಕ್ಕುವುದು ಸಿದ್ಧಾಂತಗಳ ನೆಲೆಗಟ್ಟಲ್ಲಿ ಮಾತ್ರ, ಆಕೆಯ ಇನ್ನೊಂದು ಮುಖ ಮರೆಯಾಗಿಯೇ ಉಳಿಯುವುದ

ಸಾಕ್ಷಿ-ಇತ್ತೀಚಿನ ದಶಕದಲ್ಲಿ (೧೯೭೦)ಬಂದ ಕಾದಂಬರಿಯಲ್ಲಿ ಮನುಷ್ಯನ ಅಂತಃಸಾಕ್ಷಿಯನ್ನು ಒರೆಗಲ್ಲಿಗೆ ಹಚ್ಚುವ ಕೆಲಸ ನಡೆದಿದೆ ಪ್ರೇಮದಲ್ಲಾಗಲೀ ಕಾಮದಲ್ಲಾಗಲೀ ಮನಃಸಾಕ್ಷಿ ಎನ್ನುವುದೇ ಇಲ್ಲದ ನೈತಿಕತೆಯನ್ನು ಕಿಂಚಿತ್ತೂ ಕಾಡಿಸಿಕೊಳ್ಳದ ಮಂಜಯ್ಯನನ್ನು ವ ಕೇಂದ್ರ ಪಾತ್ರದ ಸುತ್ತ ಹೆಣೆಯಲಾದ ಕಥೆಯಲ್ಲಿ ಸಾವಿತ್ರಿ, ಜಾನಕಮ್ಮ, ಸರೋಜಾಕ್ಷಿ, ಲಚ್ಚಿ ಎಂಬ ಸ್ತ್ರೀ ಪಾತ್ರಗಳು ಹಾಯುತ್ತವೆ.

ಸಾವಿತ್ರಿ ತಾನು ಪ್ರೇಮಿಸಿದ ಮಂಜಯ್ಯನನ್ನು ಮದುವೆಯಾಗಲು ಮನೆಯ ಪ್ರತಿರೋಧವನ್ನು ಎದುರಿಸುವಲ್ಲಿ ಮತ್ತು ಮದುವೆಯಾದ ಆರು ತಿಂಗಳಲ್ಲೇ ಗಂಡನ ವ್ಯಭಿಚಾರ ಕಂಡು ಆತನನ್ನು ತೊರೆದು ಬರುವಲ್ಲಿ ದಿಟ್ಟೆಯಾಗಿ ವರ್ತಿಸಿದರೂ ಆಕೆ ಆತನ ಮೋಹದಿಂದ ಕಳಚಿಕೊಳ್ಳಲು ಬಹಳ ಕಷ್ಟ ಪಡುತ್ತಾಳೆ.

ತಂದೆಯ ಮನೆಗೆ ಭಾರವಾಗಬಾರದೆಂದು ನೌಕರಿ ಮಾಡುತ್ತ ಜೀವನ ಸಾಗಿಸುತ್ತಿದ್ದವಳು ತನ್ನನ್ನು ಚಿಕ್ಕಂದಿನಲ್ಲಿ ಮಮತೆಯಿಂದ ಕಂಡ ಭಾವನತ್ತ ಆಕರ್ಷಿತಳಾಗುತ್ತಾಳೆ. ಅಕ್ಕ ಸತ್ತನಂತರ ಭಾವ ವ್ಯಯಕ್ತಿಕವಾಗಿ ಎಷ್ಟೇ ಘಾಸಿಯಾಗಿದ್ದರೂ ಅದನ್ನು ಮೀರಿ ಹಮ್ಮಿಕೊಂಡ ಅನೇಕ ಜನಸೇವಾ ಯೋಜನೆಗಳು ಆಕೆಗೆ ಬದುಕಿನ ಏಕಾಂಗಿತನ ಮರೆಯಲು ಆಕರ್ಷಕವಾಗಿ ಕಾಣುತ್ತದೆ. ಈ ಸಂದರ್ಭದಲ್ಲಿಯೇ ಗಂಡ ಮಂಜಯ್ಯನಿಂದ ಅತ್ಯಾಚಾರಕ್ಕೊಳಗಾದಾಗ ಮನಸ್ಸು ಪ್ರತಿಭಟಿಸುತ್ತಿದ್ದರೂ ದೇಹ ಕ್ರಮೇಣ ಅವನಿಗೆ ಒಲಿದದ್ದನ್ನು ನೆನೆದು ತನಗಿನ್ನೂ ದೇಹ ಸುಖದ ಮೋಹ ಕಳೆದಿಲ್ಲ ಎಂದು ತನ್ನನ್ನು ಅರ್ಥೈಸಿಕೊಂಡು ಆತನಿಂದ ನಿಂತ ಗರ್ಭವನ್ನು ತೆಗೆಸುವ ಮೂಲಕ ಎಲ್ಲ ಲೌಕಿಕ ಮೋಹವನ್ನು ಕಳೆದುಕೊಂಡು ಗಟ್ಟಿಯಾಗುತ್ತಾಳೆ.

ಆದರೆ ತನ್ನ ತಾಯಿಯ ಅನೈತಿಕ ಸಂಬಂಧದ ಬಗ್ಗೆ ತಿಳಿದಾಗ, ತಾಯಿ ಮಗಳು ಇಬ್ಬರೂ ಒಲಿದದ್ದು ಒಬ್ಬನಿಗೇ ಎಂಬ ಸತ್ಯ ಬಯಲಾದಾಗ ಮನಸ್ಸಿನ ಹೊಯ್ದಾಟ ತಾಳದೆ ತಾಯಿ ಜೀವ ಕಳೆದುಕೊಂಡ ಸ್ಥಳದಲ್ಲೇ ಅವಳನ್ನು ಹಿಂಬಾಲಿಸಲು ಹೊರಟಾಗ ಭಾವ ಸತ್ಯಪ್ಪ ಆಸರೆಯಾಗಿ ನಿಲ್ಲುತ್ತಾನೆ. ಭಾವನೊಡನೆ ದೈಹಿಕ ಸಂಬಂಧವಿಲ್ಲದ ಜನಸೇವೆಯನ್ನೇ ಗುರಿಯಾಗಿಟ್ಟುಕೊಂಡ ದಾಂಪತ್ಯವನ್ನು ಒಪ್ಪಿಕೊಳ್ಳುವ ಮೂಲಕ ಬದುಕಿನ ದಾರಿಯನ್ನು ಕಂಡುಕೊಳ್ಳುತ್ತಾಳೆ. ಹೀಗೆ ತನ್ನ ಹದಿನಾರನೇ ವಯಸ್ಸಿನಲ್ಲಿ ಕಾಡಿದ ಮೋಹದಿಂದಾಗಿ ಬದುಕು ಮುಗ್ಗರಿಸಿದ್ದರೂ, ಮೋಹವನ್ನು ಗೆದ್ದು ಜೀವನವನ್ನು ರೂಪಿಸಿಕೊಂಡ ಸಾವಿತ್ರಿಯ ಪಾತ್ರ ಆಶಾವಾದಿಯಾಗಿದೆ.

ಸಾವಿತ್ರಿಯ ತಾಯಿ ಜಾನಕಮ್ಮ ಅತ್ಯಂತ ಸತ್ಯವಂತ ಬ್ರಾಹ್ಮಣನ ಹೆಂಡತಿಯಾಗಿಯೂ ಮಂಜಯ್ಯನ ಮೋಹಪಾಶಕ್ಕೆ ಬಲಿಯಾಗುತ್ತಾಳೆ. ತನ್ನ ಅನೈತಿಕ ಸಂಬಂಧ ಗಂಡನಿಗೆ ಗೊತ್ತಾದಾಗ ಆತ್ಮಹತ್ಯೆ ಮಾಡಿಕೊಳ್ಳುವ ಮೂಲಕ ಜೀವನ ಕೊನಗಾಣಿಸಿಕೊಳ್ಳುತ್ತಾಳೆ. ಇಂತಹ ಸಂಗತಿಗಳಲ್ಲೆಲ್ಲ ಸಾಮಾಜಿಕ ಕಟ್ಟಳೆಗೆ ಹೆದರಿದ ಮೇಲ್ವರ್ಗದ ಸ್ತ್ರೀ ಹುಡುಕುವ ದಾರಿಯನ್ನೇ ಜಾನಕಮ್ಮನೂ ಕೇಡುಕೊಳ್ಳುತ್ತಾಳೆ.

ಸರೋಜಾಕ್ಷಿ ಗೃಹಿಣಿಯಾಗಿದ್ದರೂ ಗಂಡನಿಗೆ ನಿಷ್ಠೆಯಿಂದ ಇದ್ದವಳಲ್ಲ. ಪ್ರೀತಿಸಲು ಮುಚ್ಚುಮರೆ ಇರಬಾರದು ಎನ್ನುವ ಆಕೆ ತನ್ನ ಮನ ಒಪ್ಪಿದ ಇತರ ಪುರುಷರ ಜೊತೆಗೆ ಸ್ನೇಹ ಇಟ್ಟುಕೊಂಡವಳು. ತನ್ನ ಪ್ರೇಮದಲ್ಲಿ ತಾನೂ ಪ್ರಾಮಾಣಿಕವಾಗಿದ್ದು ಇತರರಿಂದಲೂ ಪ್ರಾಮಾಣಿಕತೆಯನ್ನು ಬಯಸಿದವಳು. ತನ್ನ ಅತ್ಯಂತ ಪ್ರಾಮಾಣಿಕವಾದ ಮತ್ತು ಬಿಚ್ಚುಮನಸ್ಸಿನ ಪ್ರೀತಿಯಿಂದಾಗಿಯೇ ಮಂಜಯ್ಯನಂತಹ ಕಾಮುಕನನ್ನೂ ನಿರ್ವೀರ್ಯನನ್ನಾಗಿಸಿದವಳು. ಹೀಗೆ ವಿಭಿನ್ನ ರೀತಿಯಲ್ಲಿ ಮೂಡಿದ ಸರೋಜಾಕ್ಷಿ ಪಾತ್ರವು ತನ್ನದೇ ಆದ ವ್ಯಕ್ತಿತ್ವವನ್ನು ಪಡೆದು ಗಟ್ಟಿಯಾಗಿಯೇ ಮೂಡಿ ಬಂದಿದೆ. ಮಂಜಯ್ಯನ ಸ್ವಭಾವಕ್ಕೆ ವಿರುದ್ಧವಾದ ಸ್ವಭಾವದ ಪಾತ್ರವಾಗಿ ಇದು ಚಿತ್ರಿತವಾಗಿದೆ.

ಲಚ್ಚಿ ಮಂಜಯ್ಯನ ಕುಟಿಲತನಕ್ಕೆ ಸಿಲುಕಿದ ಶೂದ್ರ ಹೆಣ್ಣು. ಮಂಜಯ್ಯನ ಮಾತುಗಳನ್ನು ನಂಬಿ ತನ್ನ ಗಂಡನ ಸಾವಿಗೆ ಆತ ಕಾರಣನಲ್ಲ ಎಂದು ಸಾಕ್ಷಿ ಹೇಳಿ ಆತ ತನ್ನನ್ನು ಧರ್ಮಪತ್ನಿಯಂತೆ ನೋಡಿಕೊಳ್ಳುತ್ತಾನೆಂದು ಕನಸಿಟ್ಟುಕೊಂಡವಳು ಲಚ್ಚಿ. ಆದರೆ ಆತನ ಕಾಮದ ಬಿಸಿ ತನ್ನ ಮಗಳನ್ನೂ ತಗುಲಿದಾಗ ಕೆರಳುವ ಲಚ್ಚಿ ಘೋರವಾಗಿ ಆತನನ್ನು ಶಿಕ್ಷಿಸುತ್ತಾಳೆ. ಸಾವಿತ್ರಿ ಮಾಡಲಾಗದ್ದನು ಲಚ್ಚಿ ಮಾಡುತ್ತಾಳೆ. ಲಚ್ಚಿಯೂ ಸಹ ಶೂದ್ರ ಹೆಣ್ಣಾದರೂ, ಸೂಕ್ಷ್ಮ ಮನಸ್ಸಿನವಳು, ಜಾಣೆ. ಗಂಡ ಸತ್ತ ನಂತರ ಮಂಜಯ್ಯನಿಗೇ ನಿಷ್ಠೆಯಿಂದ ಇದ್ದವಳು. ಮಗಳನ್ನು ಹಾಸ್ಟೆಲ್‌ನಲ್ಲಿರಿಸಿ ಓದಿಸುತ್ತಿರುವ ಆಕೆ ಮಗಳಲ್ಲೇ ಜೀವನದ ಸಾರ್ಥಕತೆಯನ್ನು ಕಾಣಬಯಸಿದವಳು. ಇಂತಹ ಆಕಾಂಕ್ಷೆ ಮಂಜಯ್ಯನಿಂದಲೇ ಚೂರಾದಾಗ ತಾಯ್ತನ ಮಗಳ ಮುಂದೆ ಅಪರಾಧಿ ಪ್ರಜ್ಞೆಯನ್ನನುಭವಿಸಲು ಪ್ರಾರಭಿಸುತ್ತದೆ. ಈ ಎಲ್ಲಸಂಗತಿಗಳಲ್ಲಿ ಲಚ್ಚಿ ತನ್ನ ಸೂಕ್ಷ್ಮತೆಯಿಂದಾ "ಶೂದ್ರ ಹೆಣ್ಣು ಮಕ್ಕಳಿಗಿಂತ ಮೇಲ್ಮಟ್ಟಕ್ಕೇರುತ್ತಾಳೆ."

ನೆಲೆ – ೮೦ರ ದಶಕದಲ್ಲಿ ಹೊರಬಂದ "ನೆಲೆ" (೧೯೮೩)ಯಲ್ಲಿ ಲೇಖಕರು ಅಗವತ್ತು ಕಳೆದ ಇಬ್ಬರು ಸ್ನೇಹಿತರ ಬದುಕಿನ ವಿಭಿನ್ನ ರೀತಿಗಳ ಮೂಲಕ ಜೀವನದ ಒಳತೋಟಿಗಳನ್ನು, ಅರ್ಥವನ್ನು, ಬದುಕಿನ ನೆಲೆಯನ್ನು ಹುಡುಕಾಡುತ್ತಾರೆ. ಇಲ್ಲಿನ ಕೇಂದ್ರ ಪಾತ್ರಗ

18ನೇ ಪುಟ ನೋಡಿ.

ಮೌನ ಮಾತಾದಾಗ

ಸ್ತ್ರೀಯರಲ್ಲಿ ಮೂಡುತ್ತಿರುವ ಜಾಗೃತಿ ಹಾಗೂ ಬದಲಾಗುತ್ತಿರುವ ಸಾಮಾಜಿಕ ಪರಿಸರ ದಿಂದಾಗಿ ಸ್ತ್ರೀಯರ ಸಮಸ್ಯೆಗಳನ್ನು ನೋಡುತ್ತಿರುವ ದೃಷ್ಟಿಕೋನಗಳು ಬದಲಾಗುತ್ತಿವೆಯಲ್ಲವೆ? ಇಂತಹ ಆಲೋಚನೆ, ವಿಚಾರಗಳು ಅಸ್ಪಷ್ಟವಾಗಿದ್ದು ವೈರುಧ್ಯಗಳಿಂದ ಕೂಡಿರಬಹುದು. ಮಹಿಳಾ ಶೋಷಣೆ, ಕೌಟುಂಬಿಕ ಜವಾಬ್ದಾರಿ, ವಿವಾಹ ಪದ್ಧತಿ, ವರದಕ್ಷಿಣೆ, ಅಸಮಾನವೇತನ ಮುಂತಾದ ವಿಷಯಗಳ ಸುತ್ತ ನಿಮ್ಮ ಸ್ವಂತ ವಿಚಾರಗಳನ್ನು ಹಾಗು ಅನುಭವಗಳನ್ನು ಪುಟ್ಟ ಲೇಖನದ ರೂಪದಲ್ಲಿ ಬರೆದು ಕಳಿಸಿದ ಲೇಖನಗಳಿಗೆಂದು "ಮೌನ ಮಾತಾದಾಗ" ಅಂಕಣವಿದೆ. ಪ್ರಕಟವಾದ ಲೇಖನಗಳಿಗೆ ಪ್ರತಿಕ್ರಿಯೆಗಳನ್ನು ಪ್ರಕಟಿಸಲಾಗುವುದು.

ಸಂ. ಮಂ.

ಆ ಹುಡುಗಿಯು ಶಾಲೆಗೆ ಹೋಗುತ್ತಿದ್ದಳು. ಮತ್ತು ಆಕೆ ನೋಡಲು ಬಹಳ ಸುಂದರವಾಗಿದ್ದಳು. ಅವಳು ಯಾವ ಕಡೆಯೂ ತನ್ನ ಮನಸ್ಸನ್ನು ಬಗ್ಗಿಸದೆ ಅವಳ ಓಧಾಯ್ತು ಅವಳಾಯ್ತು ಎಂದು ಶಾಲೆಗೆ ಹೋಗುವುದು ಮತ್ತು ಮನೆಗೆ ಬರುವುದು ಹೀಗೆ ಮಾಡುತ್ತಿದ್ದಳು. ಒಂದು ದಿನ ಶಾಲೆಗೆ ಹೋಗುತ್ತಿರುವಾಗ ಒಬ್ಬ ಹುಡುಗ ಅವಳನ್ನು ಚುಡಾಯಿಸಿದ ಆದರೆ ಅವಳು ಅದನ್ನು ಕಿವಿಗೆ ಹಾಕಿಕೊಳ್ಳದೆ ಹೊರಟು ಹೋದಳು ಅವಳು ಮನೆಗೆ ಹೋಗಿ ಅದರ ಯೋಚನೆ ಮಾಡದೆ ದಿನಾ ಮಾಡುವ ಕೆಲಸ ಮಾಡುತ್ತಿದ್ದಳು ಹೀಗೆ ಅವಳು ಹೋಗುವ ದಾರಿಯಲ್ಲಿ ಕುಳಿತು ಅವಳನ್ನು ಪ್ರತಿದಿನವೂ ಬಹಳ ಹೊಗಳುತ್ತಿದ್ದ. ಒಮ್ಮೆ ಅವಳ ಕಣ್ಣನ್ನು ಕುರಿತು ನಿನ್ನ ಕಣ್ಣು ಒಂದು ಜಿಂಕೆಯ ಕಣ್ಣಿನ ಹಾಗಿದೆ ಎಂದ. ಅದಕ್ಕೂ ಅವಳು ತನ್ನ ಮನಸ್ಸನ್ನು ಬದಲಾಯಿಸಲ್ಲಿಲ್ಲ, ಮತ್ತೊಮ್ಮೆ ಅವಳ ಮೂಗನ್ನು ಕುರಿತು ನಿನ್ನ ಮೂಗು ಎಳೆ ಸಂಪಿಗೆಯು ತೀಡಿದಂತಿದೆ ಎಂದರೂ ಆಕೆ ತನ್ನ ಮನ ಬದಲಾಯಿಸುವುದಿಲ್ಲವಾದರೂ ಮನೆಗೆ ಹೋಗಿ, ಆತ ಯಾರಿರಬಹುದು ಎಂಬ ಯೋಚನೆಯಲ್ಲಿ ತೊಡುಗುತ್ತಾಳೆ. ಇದು ಹೀಗೇ ಮುಂದುವರೆದು ಆ ಹುಡುಗಿಗೆ ಓದಿನಲ್ಲಿ ಆಸಕ್ತಿ ಕಡಿಮೆಯಾಗಿ ನಿರೀಕ್ಷಿಸಿದಂತೆ ಪರೀಕ್ಷೆಯಲ್ಲಿ ಪಾಸಾಗಲಿಲ್ಲ. ಹೀಗೆ ಅವರ ಪ್ರೇಮ ಪ್ರಾರಂಭವಾಗಿ, "ನಾನು ಅವನನ್ನು ಬಿಟ್ಟು ಬದುಕಲಾರೆ" ಎಂಬ ಮಟ್ಟಕ್ಕೆ ಆ ಹುಡುಗಿಯ ಮನ ತಲುಪಿರುತ್ತದೆ. ಇಷ್ಟರಲ್ಲಿ ಕೌಟುಂಬಿಕ ಕಾರಣಗಳಿಂದಾಗಿ ವಿದ್ಯಾಭ್ಯಾಸ ನಿಂತಿತು. ಆದರೂ ಆ ಹುಡುಗ ಆಕೆಯ ಮನೆ ಬಳಿ ಬಂದು ಗುಟ್ಟಾಗಿ ಅವಳೊಡನೆ ಭೆಟ್ಟಿಯಾಗುತ್ತಿದ್ದ.

ಒಮ್ಮೆ ಅವರ ಮನೆಗೆ ಬಂದವರು ಆ ಹುಡುಗಿಯನ್ನು ಮೆಚ್ಚಿ, ಮದುವೆಯ ಮಾತುಕತೆ ನಡೆಸಿದರು. ಅವಳಿಗೆ ತುಂಬ ದುಃಖವಾಯ್ತು. ಮಾರನೇ ದಿನ ಅವನು ಬಂದಾಗ ಅವಳು ತನಗೆ ಶೀಘ್ರದಲ್ಲೇ ನಿಶ್ಚಿತಾರ್ಥವಾಗಲಿರುವ ಸುದ್ದಿ ತಿಳಿಸಿ, "ನಂಗೆ ಬೇರೆಯವರನ್ನು ಮದುವೆಯಾಗಲು ಇಷ್ಟವಿಲ್ಲ, ನಿನ್ನನ್ನೇ ಮದುವೆಯಾಗಬೇಕೆಂಬುದೇ ನನ್ನಾಸೆ, ಏನಾದರೂ, ಹೇಗಾದರೂ ನನ್ನನ್ನು ಈ ಕಷ್ಟದಿಂದ ಪಾರುಮಾಡಿ ನನ್ನನ್ನು ಮದುವೆಯಾಗು" ಎಂದು ಬೇಡಿದಳು, ಅವನು ತನ್ನಲ್ಲೇ ಯೋಚಿಸಿ, ಈಕೆ ಹೆಂಡತಿಯಾದರೆ ತನಗೆ ಬರುವ ಲಾಭ ಅಷ್ಟಕ್ಕೇ ಎಂದು ನಿರ್ಧರಿಸಿ, ನಿನ್ನ ಮನೆಯಲ್ಲಿ ಹಿರಿಯರು ಹೇಳಿದಂತೆ ನಡೆದುಕೋ ಈ ಮದುವೆಗೆ ಒಪ್ಪಿಕೋ ನಿನಗೆ ನನ್ನಿಂದ ಯಾವ ರೀತಿಯ ಸುಖವೂ ಸಿಗಲಾರದು ನನಗಿನ್ನೂ ಕೆಲಸವೇ ಇಲ್ಲ ನಿನ್ನನ್ನು ಹೇಗೆ ಸಾಕಲಿ? ನಾನು ಕೆಲಸ ಹುಡುಕಿಕೊಂಡು ದೂರದ ಊರಿಗೆ ಹೊರಟ್ಟಿದ್ದೇನೆ. ಅದನ್ನೇ ಹೇಳಿ ಹೋಗಲು ಬಂದೆ. ನೀನು ನಿರ್ಯೋಚನೆಯಿಂದ ಈಗ ಬಂದಿರುವ ಸಂಬಂಧಕ್ಕೆ ಒಪ್ಪಿಗೆ ನೀಡು ಎಂದು ಹೇಳಿದ. ಅವಳಿಗೆ ಈ ಮಾತು ಕೇಳಿ ಎದೆ ಬಿರಿದು ಹೋಯ್ತು ಆಕೆ ಬಹಳ ದುಃಖದಿಂದ ಎಷ್ಟೆಷ್ಟು ಬೇಡಿಕೊಂಡರೂ ಅವ ಕರಗಲ್ಲಿಲ್ಲ. ಎರಡು ದಿನಗಳ ನಂತರ ಆಕೆಗೆ ಅವನು ವರದಕ್ಷಿಣೆಯ ಆಸೆಗೆ ಬೇರೊಂದು ಸಂಬಂಧಕ್ಕೆ ಒಪ್ಪಿರುವ ಸುದ್ದಿ ತಿಳಿದು ಆತ್ಮಹತ್ಯೆಗೆ ಯತ್ನಿಸಿ ವಿಫಲಳಾದಳು. ವ ನೆಯಲ್ಲಿ

24ನೇ ಪುಟ ನೋಡಿ

11ನೇ ಪುಟದಿಂದ

ನಂತರ ಕೊಳದಲ್ಲಿ ಮುಖವನ್ನು ಕಾಣಲು ಇಣುಕಿದಳು. ಕೊಳದಲ್ಲಿ ವಿಕಾರವಾದ ಆಕೃತಿಗಳು ಇವಳನ್ನು ನುಂಗುವಂತೆ ಆಹ್ವಾನಿಸುತ್ತಿದ್ದವು. ಪ್ರಕೃತ ಸಾಧು ಹೇಳಿದ್ದು ನೆನಪಾಗಿ ಹೆದರಬಾರದೆಂದು, ಅವುಗಳನ್ನೇ ದಿಟ್ಟಿಸಿದಳು. ಅವು ಮಾಯವಾಗಿ ಸ್ವಚ್ಛವಾದ ಜಲ ಬಂದು ಅವಳ ಮುಖ ಕಾಣಿಸಿತು. ನೆಮ್ಮದಿಯಿಂದ ಹಿಂದೆ ತಿರುಗಿ ನೋಡಿದರೆ ಕ್ರೂರವಾದ ಒಂದು ಆಕೃತಿ ಅವಳೆಡೆ ದುರುದುರುನೆ ನೋಡುತ್ತಿತ್ತು. ಪ್ರಕೃತ ಹಿಂಜರಿಯದೆ, ತನ್ನ ಚಾಕುವನ್ನು ತೆಗೆದು ಗುರಿಯಿಟ್ಟು ಸಾಧುವನ್ನು, ತಾಯಿಯನ್ನು ನೆನೆಸುತ್ತಾ ಅದರೆಡೆಗೆ ಬೀಸಿದಳು. ಚಾಕು ನೇರವಾಗಿ ಎದೆಗೆ ನಾಟಿ ಆಕೃತಿ ಒದ್ದಾಡುತ್ತಾ ತಟಸ್ಥವಾಯಿತು. ಪ್ರಕೃತ ಇಳಿ ಹೋಗಿ ಚಾಕುವನ್ನು ಕಿತ್ತುಕೊಂಡಳು. ಒಡನೆಯೇ ಆ ಆಕೃತಿ ಸುಂದರನಾದ ರಾಜಕುಮಾರನಾಗಿ ಎದ್ದು ಕುಳಿತನು.

ದಿಕ್ಕುತೋಚದೆ ರಾಜಕುಮಾರನನ್ನು ನಿಟ್ಟಿಸಿನೋಡಿದಳು ರಾಜಕುಮಾರನ ಕಣ್ಣಲ್ಲಿ ಆನಂದ ಬಾಷ್ಪಗಳು ತುಂಬಿದ್ದವು. ರಾಜಕುಮಾರ ಪ್ರಕೃತಳ ಹತ್ತಿರ ಬರುತ್ತಿದ್ದ ಹಾಗೆ ಪ್ರತಿ ಹನಿ ಕಣ್ಣೀರು ಮುತ್ತುಗಳಾಗಿ ಮಾರ್ಪಾಡಾದವು ರಾಜಕುಮಾರನು " ನೀನು ನನ್ನನ್ನು ಮುಕ್ತಿಗೊಳಿಸಿದೆ. ನಿನ್ನನ್ನು ಮದುವೆಯಾಗಿ ನನ್ನ ರಾಜ್ಯಕ್ಕೆ ಕರೆದೊಯ್ದು ನಿನ್ನನ್ನುರಾಣಿಯನ್ನಾಗಿ ಮಾಡುತ್ತೇನೆ " ಎಂದು ಹೇಳಿದನು ಪ್ರಕೃತ " ಮೊದಲು ನೀನು ಶಾಪದಿಂದ ಏಕೆ ನರಳುತ್ತಿದ್ದೆಯೆಂದು ವಿವರಿಸಿ ಹೇಳು " ಎಂದು ಕೇಳಿದಾಗ ರಾಜಕುಮಾರ ತನ್ನ ಪೂರ್ವ ಚರಿತ್ರೆಯನ್ನು ಹೇಳಿದ

ನಾನು ನಿಮ್ಮ ಪಕ್ಕದ ರಾಜ್ಯವಾದ ಹಿಮಪುರಿಯ ರಾಜನ ಮಗ. ಬಹಳ ವರ್ಷ ರಾಜ-ರಾಣಿಯರಿಗೆ ಮಕ್ಕಳು ಇರಲ್ಲಿಲ್ಲ ನಂತರ ಒಂದು ಗಂಡು ಮಗು ಹುಟ್ಟಿತು. ಆ ಮಗು ಅತ್ತರೆ, ನಕ್ಕರೆ ಮುತ್ತುಗಳು ಸುರಿಯುತ್ತಿದ್ದವು. ಆ ರಾಜ್ಯದ ಪ್ರತಿಷ್ಠೆ ಐಶ್ವರ್ಯ ಎರಡೂ ಹೆಚ್ಚುತ್ತಾಹೋದವು. ರಾಜನಿಗೂ ಅಹಂಕಾರ ಹೆಚ್ಚುತ್ತಾ ಹೋಯಿತು.

ಗುರುಹಿರಿಯರನ್ನು ತುಚ್ಛವಾಗಿ ಕಾಣುವುದು ಅವಮಾನ ಮಾಡುವುದು ಮೊದಲಾದವುಗಳನ್ನು ಮಾಡುತ್ತಿದ್ದನು ಒಂದು ದಿನ ಅಲ್ಲಿಗೆ ಬಂದ ಸಾಧುವನ್ನು ರಾಜ ಅವಮಾನ ಮಾಡಿ ಕತ್ತು ಹೊರ ನೂಕಿದನು ಅವಮಾನಿತನಾದ ಸಾಧು, ' ನಿನ್ನ ಮುತ್ತಿನ ರಾಜಕುಮಾರ ರೋಮ ತುಂಬಿದ ಕ್ರೂರ ಪ್ರಾಣಿಯಾಗಲಿ, ನಿನ ರಾಜ್ಯವೆಲ್ಲ ಕೆಂಪು ಹೂವಿನ ತೋಪಾಗಲೀ, ನಿನ್ನ ಅರಮನೆಯು ಭೂತ ಪಿಶಾಚಿಗಳ ಕೊಳವಾಗಲಿ ' ಎಂದು ಶಾಪ ಹಾಕಿದ ಅಷ್ಟರಲ್ಲೇ ನನ್ನ ತಾಯಿ ಓಡಿ ಬಂದು ನನ್ನ ಕಂದನನ್ನು ಉಳಿಸಿ ಕೊಡಿ ನನ್ನ ಮಗುವಿಗೆ ವಿಮೋಚನಾ ದಾರಿ ತೋರಿಸಿ ಎಂದು ಗೋಳಿಟ್ಟಳು. ಸಾಧು ನೀಡಿದ ಶಾಪ ಕೇಳಿ, ರಾಜ ಎದೆ ಒಡೆದು ಸತ್ತ. ರಾಜ ಸತ್ತುದದನ್ನು ನೋಡಿ ರಾಣಿಯು ಮಗುವನ್ನು ಸಾಧುವಿನ ಪಾದದ ಬಳಿ ಇಟ್ಟು ಪ್ರಾಣ ಬಿಟ್ಟಳು. ನಾನು 'ನಾನು ಕೊಟ್ಟ ಶಾಪವನ್ನು ಹಿಂದಕ್ಕೆ ತೆಗೆದುಕೊಳ್ಳುವ ಹಾಗಿಲ್ಲ ನೀನು ಮದುವೆಯಾಗುವ ಹುಡುಗಿಯಿಂದ ಮಾತ್ರ ನಿನಗೆ ಮುಕ್ತಿ ದೊರೆಯುತ್ತದೆ ' ಯೆಂದು ಸಾಧುವು ಹೊರಟು ಹೋದನು. ಈಗ ನನಗೆ ನಿನ್ನಿಂದ ವಿಮೋಚನೆ ಸಿಕ್ಕಿದೆ " ಎಂದು ಅವಳನ್ನು ಹೊಗಳಿದನು

ಪ್ರಕೃತ ತನ್ನ ಜೀವನದಲ್ಲಿ ಬಂದ ಕಷ್ಟಗಳನ್ನು ಮುತ್ತಿನ ರಾಜಕುಮಾರನಿಗೆ ಹೇಳಿದಳು ತನಗೆ ಸಹಾಯ ಮಾಡಿದ ತಾತನನ್ನು ಕುರಿತು ಹೇಳಿದಾಗ ಮುತ್ತಿನ ರಾಜಕುಮಾರ ಹೇಳಿದ ಸಾಧು, ತನಗೆ ಸಹಾಯ ಮಾಡಿದ ತಾತ ಒಬ್ಬನೇ ಇರಬಹುದೇ ಎಂಬ ಅನುಮಾನ ಅವಳಿಗೆ ಬಂದಿತು. ಮುತ್ತಿನ ರಾಜಕುಮಾರನನ್ನು ಕರೆದುಕೊಂಡು ತಾತನ ಬಳಿ ಹೋದಾಗ ಅವಳ ಅನುಮಾನ ನಿಜವಾಗಿತ್ತು. ಅವರಿಬ್ಬರನ್ನೂ ನೋಡಿದ ಸಾಧು ತುಂಬು ಮನಸ್ಸಿನಿಂದ ಆಶೀರ್ವಾದ ಮಾಡಿ, " ನೋಡು ಪ್ರಕೃತ ತೋರಿದ ಧೈರ್ಯ, ಸಾಹಸ, ವಿಶ್ವಾಸದಿಂದ ನಿನ್ನ ಜೀವನಕ್ಕೂ ಒಂದು ನೆಲೆ ಸಿಕ್ಕಿತು. ನೀನು ಶಾಪದಿಂದ ಮುಕ್ತಿಯನ್ನೂ ಪಡೆದೆ " ಎಂದು ಮುತ್ತಿನ ರಾಜಕುಮಾರನಿಗೆ ಹೇಳಿದನು. ಪ್ರಕೃತಳನ್ನು ಮದುವೆಯಾದ ರಾಜಕುಮಾರ ಅವಳ ಇಷ್ಟದಂತೆ ನಡೆಸಿಕೊಂಡು ಸಂತೋಷದಿಂದ ಜೀವನ ಸಾಗಿಸಿದರು.

ಗೆಳತಿಗೆ

ಗೆಳತಿ ಆಕಾಶದಲ್ಲಿ ಒಂದೇ ನಕ್ಷತ್ರ ಬಂದು
ಮಿನುಗುವ ಹಾಗೆ ನಿನ್ನ ಮುಖ
ನೋಡಲು ಬಹಳ ಚೆಂದ
ಆಕಾಶದಲ್ಲಿ ನಕ್ಷತ್ರ ಮತ್ತು ಚಂದ್ರ
ಅಕ್ಕ-ಪಕ್ಕದಲ್ಲಿದ್ದರೆ
ನೀನು ನನ್ನ ಪಕ್ಕದಲ್ಲಿಯೇ ಇರುವೆಯೇನೋ
ಎಷ್ಟೊಂದು ಚೆಂದ

ಸ್ನೇಹ

ಬೆಟ್ಟಗಳು ಉರುಳಬಹುದು
ಸಾಗರಗಳು ಕೆರಳಬಹುದು
ಸೂರ್ಯ ಚಂದ್ರರು ಮರೆಯಾಗಬಹುದು
ಆದರೆ ನಾನು ನಿನ್ನ
ಎಂದೆಂದಿಗೂ ಮರೆಯಲಾರೆ

ಎಚ್. ನಜಹತ್ ಷಾಹೀನ್

ಳಾದ ಜವರಾಯಿ ಮತ್ತು ಕಾಳಪ್ಪನವರ ಜೀವನಗಳ ಮುಖಾಮುಖಿಯಲ್ಲಿ ಪ್ರಶ್ನೆಗಳನ್ನೆತ್ತುವ ಸ್ತ್ರೀ ಪಾತ್ರಗಳು ಜವರಾಯಿಯ ಹೆಂಡತಿ ಸುಬ್ಬಲಕ್ಷ್ಮಿ, ಗೆಳತಿ ಪಾರ್ವತಿ, ಸೊಸೆ ಮಾಲತಿ, ಕಾಳಪ್ಪನವರನ್ನು ಹಣಕ್ಕಾಗಿ ಪೀಡಿಸುವ ಅವರ ತಂಗಿಯರು – ತಮ್ಮನಿಂದ ಏನೊಂದೂ ಅಪೇಕ್ಷಿಸದ ಅಕ್ಕ — ತಮ್ಮ ಎನ್ನುವ ಪ್ರೀತಿ ಮಾತ್ರ ಸಾಕೆನ್ನುವ ಅವರ ಅಕ್ಕ.

ಸುಬ್ಬಲಕ್ಷ್ಮಿ ಎಲ್ಲ ಸಂಪ್ರದಾಯಸ್ಥ ಹೆಣ್ಣುಗಳಂತಹ ತನ್ನದೇ ಆದ ಯಾವುದೇ ನಿರ್ಧಾರಗಳಿಲ್ಲದ ಮಾದರೀ ಹಿಂದೂ ಸ್ತ್ರೀ. ಮನದ ಹಂಬಲಗಳನ್ನು ಸಾಮಾಜಿಕ ಚೌಕಟ್ಟಿನಲ್ಲಿ ನೋಡಿ, ಅವುಗಳನ್ನು ಹುಟ್ಟಿದಲ್ಲಿಯೇ ಹಿಸುಕಿ ಹಾಕುವ ಸುಬ್ಬಲಕ್ಷ್ಮಿ ನಾಲ್ಕು ಜನರ ಸಮ್ಮತಿಯಿಂದ ಗಂಡ ಸತ್ತಾಗ ಕೇಶ ಮುಂಡನ ಮಾಡಿಸದೇ ಇರುವುದಕ್ಕೆ ಅವಕಾಶ ಸಿಕ್ಕಾಗ ಅದನ್ನು ಒಪ್ಪಿಕೊಳ್ಳುವವಳು. ಅದಕ್ಕಾಗಿ ಒಳಗೇ ಖುಷಿಪಟ್ಟವಳು. ಒಟ್ಟಿನಲ್ಲಿ ಮೇಲ್ಜಾತಿಯ ಹಿಂದೂ ಸಂಸ್ಕೃತಿಯ ಗೃಹಿಣಿ ಮಾತ್ರ.

ಮಾಲತಿ ಬ್ಯಾಂಕೊಂದರ ಅಧಿಕಾರಿ, ಆಧುನಿಕ ಹುಡುಗಿ. ಆಫೀಸಿನಲ್ಲಿ ನಿಷ್ಠೆಯಿಂದ ದುಡಿಯುತ್ತ ತನ್ನ ಕ್ಷೇತ್ರದಲ್ಲಿ ತನ್ನ ವ್ಯಕ್ತಿತ್ವ ಬೆಳೆಸಿಕೊಳ್ಳುವ ಆಕೆ ಅದಕ್ಕಾಗಿ ತನ್ನ ಸಾಂಸಾರಿಕ ಜೀವನವನ್ನು ಯೋಜಿತಗೊಳಿಸುವವಳು. ಭಾವನಾತ್ಮಕ ಸಂಬಂಧಗಳಿಗಿಂತ ಹೆಚ್ಚಾಗಿ ವ್ಯವಹಾರಿಕ ಸಂಬಂಧಗಳ ಬಗ್ಗೆ ಯೋಚಿಸುವಂತಹವಳು. ಆಧುನಿಕ ಕೌಟುಂಬಿಕ ಜೀವನದ ಪ್ರತೀಕವಾಗಿ ಮೂಡಿದ ಪಾತ್ರವು ಕಥೆಯಲ್ಲಿ ಸಾವಿನ ಹಿನ್ನೆಲೆಯಲ್ಲಿ, ಬದುಕಿನ ಅಪ್ಪ-ಮಗನ ಸಂಬಂಧದ ಆಧುನಿಕತೆ—ಸಂಪ್ರದಾಯಗಳ ತುಲನೆಗೆ ಸಹಾಯಕವಾಗಿದೆಯೇ ಹೊರತು, ಪಾತ್ರದ ಆಳ, ಹರವು ನಮಗೆ ಪೂರ್ತಿಯಾಗಿ ದಕ್ಕದೇ ಅಪೂರ್ಣವಾಗಿ ಉಳಿಯುತ್ತದೆ.

ಜವರಾಯಿಯ ಇಳಿ ವಯಸ್ಸಿನಲ್ಲಿ ಆತನ ಮನಸ್ಸಿನ ಭಾವನೆಗಳಿಗೆ ಸ್ಪಂದಿಸುವ ಗೆಳತಿಯಾಗಿ ದಕ್ಕಿದವಳು ಪಾರ್ವತಿ. ಸರ್ಕಾರಿ ಆಸ್ಪತ್ರೆಯೊಂದರ ದಾದಿಯಾದ ಈಕೆ ಲೈಂಗಿಕ ಜನ್ಯ ಸ್ನೇಹದ ಬಗ್ಗೆ ಮಡಿವಂತಿಕೆ ಇಲ್ಲದ ವೈಚಾರಿಕ ಹೆಣ್ಣು........ "ಮಕ್ಕಳು ಪೂರ್ಣವಾಗಿ ತಾಯಿಗೆ ಸೇರಿದವು. ಪ್ರಾಣಿಗಳಲ್ಲಿ ಇದೇ ಅಲ್ಲವೇ ಸಂಗತಿ." .... "ಪ್ರಕೃತಿಯಲ್ಲಿಲ್ಲದ ಹೊಣೆಯನ್ನು ಮನುಷ್ಯ ಸಮಾಜ ಗಂಡಿಗೆ ಯಾಕೆ ಹೇರಬೇಕು?........ನನ್ನ ಮಗುವಿನ ಪಾಲನೆ ಪೋಷಣೆಯ ಪೂರ್ಣ ಹೊರೆ ನನ್ನದು. ಮುಂದೆ ಸ್ಕೂಲಿನಲ್ಲಿ ಸರ್ಕಾರಿ ಲೆಕ್ಕದಲ್ಲಿ ಹೆಸರು ಬರೆಸುವಾಗ ಬರೀ ಪಾರ್ವತಮ್ಮ ಅಂತ ಬರೆಸ್ತೀನಿ, ನಿಮ್ಮ ಹೆಸರಲ್ಲ" ಎನ್ನುವ ಕೌಟುಂಬಿಕ ಮೌಲ್ಯಗಳನ್ನೇ ಪ್ರಶ್ನಿಸುವಂತಹ ಧೋರಣೆಗಳುಳ್ಳವಳು. "ಹೆಣ್ಣಿನ ಒಂಟಿತನ ನೀಗಲು ಮಗು-ಬರೀ ಹುಟ್ಟಿಸಲು ಕಾರಣವಾದ ಪುರುಷ ಅದು ಹುಟ್ಟಿದ ನಂತರ ತನ್ನದಲ್ಲ ಎಂದು ಭಾವಿಸಬೇಕು" ಎಂದು ತಾಯ್ತನದ ಪೂರ್ಣ ಹಕ್ಕನ್ನು ಪಡೆಯಲಿಚ್ಛಿಸುವ ಪಾರ್ವತಿ ತನ್ನ ಬದುಕಿನ ಅನುಭವದ ಹಿನ್ನೆಲೆಯಲ್ಲಿ ಪಕ್ವವಾದ ಪರಿಪೂರ್ಣ ಹೆಣ್ಣು. ಪಾರ್ವತಿಯ ಪಾತ್ರ ಇಂತಹ ಕ್ರಾಂತಿಕಾರಕ ವಿಚಾರಗಳಿಂದಾಗಿ ಭಿನ್ನವಾಗಿ ನಿಲ್ಲುತ್ತದೆ. ಮಾಲತಿ ಆಧುನಿಕ ಹುಡುಗಿಯಾಗಿದ್ದರೂ ವೇಷ ಭೂಷಣ, ಯೋಜಿತ ಸಂಸಾರ ಇಂತಹುದರಲ್ಲಿ ಮಾತ್ರ ಆಧುನಿಕತೆ ಪಡೆದಿದ್ದರೆ ಪಾರ್ವತಿ ತನ್ನ ವಿಚಾರಧಾರೆಗಳ ಮೂಲಕ ಮೂಲಭೂತವಾದ ಮೌಲ್ಯಗಳನ್ನೇ ಅಲ್ಲಾಡಿಸುವಂತಹ ನಿಜವಾದ ಆಧುನಿಕತೆ ಪಡೆದಿರುತ್ತಾಳೆ. ಜವರಾಯಿಯಂತೆ ಈಕೆಯೂ ತನ್ನ ಬದುಕಿನ ಮೂಲಕವೇ ಸಾವಿನ, ಬದುಕಿನ ನೆಲೆಯನ್ನು ಶೋಧನೆ ಮಾಡಿಕೊಂಡು ತನ್ನದೇ ಆದ ಅರ್ಥ ಕಂಡುಕೊಂಡಿರುತ್ತಾಳೆ. ಹಾಗಾಗಿ ಪಾರ್ವತಿಯ ಪಾತ್ರ ಗಟ್ಟಿಯಾಗುತ್ತದೆ.


ಮೇಲಿನ ನಾಲ್ಕು ಕಾದಂಬರಿಗಳು ರಚಿತವಾದ ಕಾಲವನ್ನು ಗಮನಿಸಿದರೆ ಅವುಗಳಲ್ಲಿ ಒಡಮೂಡಿರುವ ಮೌಲ್ಯಗಳ ಸಂಘರ್ಷಕ್ಕೂ ಅದಕ್ಕೂ ನಿಕಟ ಸಂಬಂಧವಿರುವುದು ಸ್ಪಷ್ಟವಾಗುತ್ತದೆ. ಆದ್ದರಿಂದ ಸುಮಾರು ನಾಲ್ಕು ದಶಕಗಳ ಸಾಮಾಜಿಕ ಮೌಲ್ಯಗಳನ್ನು ಇಲ್ಲಿ ಗೃಹಭಂಗದ ನಂಜಮ್ಮ, ದಾಟುವಿನ ಸತ್ಯಭಾಮೆ, ಸಾಕ್ಷಿಯ ಸಾವಿತ್ರಿ, ನೆಲೆಯ ಪಾರ್ವತಿಯರ ಮೂಲಕ ಸಾಂಕೇತಿಸಲಾಗಿದೆ. ಬದುಕಿನಲ್ಲಿ ಸಂಘರ್ಷಕ್ಕಿಳಿಯುವ ದೃಷ್ಟಿಯಲ್ಲಾದರೂ ಸ್ತ್ರೀ ಪಾತ್ರಗಳ ವಿಶ್ಲೇಷಣೆಯ ಹಾದಿಯಲ್ಲಿ ಇವು ಮೆಚ್ಚುಗೆಗೆ ಒಳಗಾಗುತ್ತವೆ.

ಉಸಿರಾಡಲಿ ಅವಳು

ತೆರೆಯಿರಿ ಕಿಟಕಿ, ಬಾಗಿಲುಗಳ;
ಗಾಳಿ ಬರಲಿ ಒಳಗೆ;
ಅವಳು ಉಸಿರಾಡಲಿ.
ಬರಲಿ ಸ್ವಂತದ ಗಾಳಿ

ಸ್ಪಂದಿಸಲು ಬಿಡಿ
ಹೊರಗಿನ ಆಗುಹೋಗುಗಳಿಗೆ;
ಆಶೋತ್ತರಗಳಿಗೆ
ನಿಧಾನವಾಗಿ ದಾಟಲಿ ಹೊಸ್ತಿಲು
ಮೇಲೇರಲಿ; ಬರಲಿ ಹೊಸ ಗಾಳಿ

ಸಿದ್ಧಾಂತಗಳಿಗೆ ಬದ್ಧಳಾಗಲು
ಒದ್ದಾಡಿಸಬೇಡಿ
ಬೆಳೆಯಲಿ ಅವಳು
ಸ್ವಂತದಾದ ದಾರಿಯಲ್ಲಿ
ಉಸಿರಾಡಲು ಬಿಡಿ
ಬರಲಿ ಸ್ವಂತದ ಗಾಳಿ



ಪಕ್ಕನೆ ವರ್ತಮಾನಕ್ಕೆ
ಅತುಕೊಳ್ಳುವ ಮುನ್ನ

ಹತಾಶೆಯಿಂದ
ಕೈ ಹೊತ್ತು ಕೂರುವ ಮುನ್ನ

ತೆರೆಯಿರಿ ಕಿಟಕಿ ಬಾಗಿಲುಗಳ
ಸ್ವಾಮಿ, ಬರಲಿ ಹೊಸಗಾಳಿ;
ಅವಳು ಉಸಿರಾಡಲಿ

ಭಗವತಿ ಎಂ. ಆರ್.
ಕನಕಪುರ.

ನೆಲೆ ಕಂಡ ಬದುಕು

ಗೀತಾ ಜಿ. ಎಸ್.

ಮಂಗಳಮ್ಮನವರಿಗೆ ೯ ವರ್ಷಕ್ಕೆ ಮದುವೆ, ೧೬ ವರ್ಷಕ್ಕೆ ವಿಧವೆ, ಈ ಪಟ್ಟದೊಂದಿಗೆ ಒಂದು ವರ್ಷದ ಎಳೆಕೂಸು, ಅವರ ಪತಿ ಮರಣ ಹೊಂದಿದ್ದು ದೂರದ ನಗರದಲ್ಲಿ; ಯಾರಿಂದಲೋ ನಿಧನವಾರ್ತೆ ಕೇಳಿ ಅವರ ಅಣ್ಣ ನಗರಕ್ಕೆ ಧಾವಿಸಿ, ಎಲ್ಲ ವಿಧಿಗಳನ್ನೂ ಪೂರೈಸಿದ್ದರು. ಭಾವನ ನೆನಪಿನೊಂದಿಗೆ ಹಿಂತಿರುಗಿದ್ದರು. ಈ ದುರ್ದೈವಿ ತಾಯಿಯ ಪೂರ್ಣ ಹೆಸರು ಸರ್ವ ಮಂಗಳೆ ಎಂದು. ಈಗ ಆ ಹೆಸರಿಗೇ ವಿರುದ್ಧವಾಗಿ, ವಿರೂಪ ತಾಳಬೇಕಾಗಿತ್ತು—ಸಂಪ್ರದಾಯ, ಶಾಸ್ತ್ರಗಳನ್ನು ವಿಧಿಸಿದ್ದ ಸಮಾಜದ ಕಟ್ಟಳೆಗಳನ್ನು ಪಾಲಿಸಲೇಬೇಕಾಗಿತ್ತು. ವಿಚಿತ್ರ ಕಟ್ಟಳೆಗಳನ್ನು ರೂಪಿಸಿದ್ದ ಸಮಾಜ ಇಂಥ ಅಭಾಗಿನಿಯರ ಜೀವನದ ಬಗ್ಗೆ ಮಾತ್ರ ನಿರ್ಲಿಪ್ತವಾಗಿದೆ ಅಂದೂ, ಇಂದೂ ಸಹ. ಅಣ್ಣನ ಮನೆಯಲ್ಲಿ ಕೆಲದಿನಗಳು ಇದ್ದರು. ಆದರೆ ಈಕೆ ಸ್ವಾಭಿಮಾನಿ ಹೆಂಗಸು. ಮತ್ತೊಬ್ಬರ ಹಂಗಿನಲ್ಲಿ ಬದುಕಲಿಚ್ಛಿಸುವವರಲ್ಲ ಆದರೆ ಜೀವನಕ್ಕೇನು ದಾರಿ? ಶಾಲೆಯ ಹೆಸರು ಮಾತ್ರ ಕೇಳಿದ್ದರು. ಸಣ್ಣ ವಯಸ್ಸಿನಲ್ಲೇ ಸಂಸಾರದ ಹೊರೆ ತಲೆಯ ಮೇಲೆ ಬಿದ್ದುದರಿಂದ ಅನುಭವವೇ ಸಾಕಷ್ಟು ವಿದ್ಯೆಯಾಗಿತ್ತು. ಆ ಸಣ್ಣ ಹಳ್ಳಿಯಲ್ಲೇ ಅವರಿವರ ಮನೆಗಳಲ್ಲಿ ಸಾಗುತ್ತಿದ್ದ ವಿಶೇಷಗಳಲ್ಲಿ ಕತ್ತಲು ಕೋಣೆಯಲ್ಲಿ ಕುಳಿತು, ವಿಶೇಷ ಭಕ್ಷ್ಯಗಳನ್ನು ತಯಾರಿಸುತ್ತಿದ್ದರು. ಅವರು ಎದುರಿಗೆ ಬರಬಾರದಷ್ಟೇ, ಮತ್ತೆ ಅಂಥವರ ಕೈಲಿ ಎಷ್ಟು ಚಾಕರಿ ಮಾಡಿಸಿಕೊಂಡರೂ ಸೈಯಲ್ಲವೆ?

ಅವಲಕ್ಕಿ, ಉಪ್ಪಿನಕಾಯಿ, ಹಪ್ಪಳ, ಸಂಡಿಗೆ.... ಇತ್ಯಾದಿಗಳ ಬೇಡಿಕೆಯಿದ್ದರೆ ಮಂಗಳಮ್ಮನವರಿಗೆ ಬುಲಾವ್. ಆ ಸಣ್ಣ ಹಳ್ಳಿಯಲ್ಲಿ ಇದ್ದ ನಾಲ್ಕಾರು ಮನೆಗಳಿಂದ ಬರುತ್ತಿದ್ದ ಪುಡಿಗಾಸು "ರಾವಣನ ಹೊಟ್ಟೆಗೆ ಅರಕಾಸಿನ ಮಜ್ಜಿಗೆ" ಯಂತಾಗುತ್ತಿತ್ತು. ಸಂಸಾರದ ಯಾವ ತೇಪೆಯನ್ನೂ ಮುಚ್ಚಲಾಗುತ್ತಿರಲಿಲ್ಲ. ಕಡೆಗೆ ತಮ್ಮ ಸಂಬಂಧಿಯೊಬ್ಬರ ಸಲಹೆಯಂತೆ ಬೆಂಗಳೂರಿಗೆ ಬಂದರು, ತಮ್ಮದೇ ಪುಟ್ಟ ಮನೆಯೆಂಬ ಕೋಳಿಗೂಡಿನಲ್ಲಿ ವಾಸ ಪ್ರಾರಂಭಿಸಿದರು. ಅವರಿವರನ್ನು ವಿಚಾರಿಸಿ, ಅಡುಗೆಯ ಕೆಲಸಕ್ಕೆ ಮನೆಗಳನ್ನು ಗೊತ್ತು ಮಾಡಿಕೊಂಡರು. ಮೊದಲಿಗೆ ಸಿಕ್ಕ ಮನೆಗಳು ಸ್ವಲ್ಪ ಕರುಣೆಯಿಲ್ಲದ ಯಜಮಾನಿತಿಯರ ಆಡಳಿತದವೇ ಆದರೂ ಹೇಗೊ ಹೊಂದಿಕೊಂಡು ಕಾಲ ಹಾಕಿದರು. ಕೆಲ ತಿಂಗಳುಗಳವರೆಗೆ ದುಡಿದು, ಕಾಸಿಗೆ ಕಾಸು ಸೇರಿಸಿ, ತಮ್ಮ ಹಳ್ಳಿಯಿಂದ ಬರುವಾಗ ತಾವು ಕೆಲವರಿಂದ ತಂದಿದ್ದ ಕೈಗಡ ತೀರಿಸಿದರು. ಅಷ್ಟರಲ್ಲಿ ವೃದ್ಧ ದಂಪತಿಗಳ ಸಂಸಾರದ ಪರಿಚಯವಾಗಿತ್ತು. ಹುರಿದು ತಿನ್ನುವಷ್ಟು ಆಸ್ತಿಯಿದ್ದರೂ, ಮಕ್ಕಳಿಲ್ಲ ದೂರವಿದ್ದುದರಿಂದ ಈ ದಂಪತಿಗಳನ್ನು ವಿಚಾರಿಸುವವರೇ ಇರಲಿಲ್ಲ. ಸರಿ, ಅವರ ಮನೆಯಲ್ಲಿಯೇ ಬೆಳಗಿನಿಂದ ಸಂಜೆವರೆಗೆ ಹಲವಾರು ಬಾರಿ ರಾತ್ರಿಯವರೆಗೂ ಊಟೋಪಚಾರಗಳನ್ನು ನೋಡಿಕೊಳ್ಳುತ್ತಾ, ಪ್ರಾಮಾಣಿಕ ಸೇವೆ ಸಲ್ಲಿಸುತ್ತಿದ್ದರು. ಕೈ ತುಂಬ ಎನ್ನುವಷ್ಟು ದುಡ್ಡು ಬಾರದಿದ್ದರೂ, ಬರುವುದರಲ್ಲಿಯೇ ತೃಪ್ತಿಪಟ್ಟುಕೊಳ್ಳುವವರಾದುದರಿಂದ ಅಚ್ಚುಕಟ್ಟಾಗಿ ಜೀವನ ನಡೆಸುತ್ತಿದ್ದರು.

ವರ್ಷಗಳು ಕಳೆದಂತೆ ಮಗನೂ ಬೆಳೆಯುತ್ತಾ ಬಂದ, ಅವನಿಗೆ ವಿದ್ಯಾಭ್ಯಾಸವಾಗಬೇಕಲ್ಲ, ಪ್ರಾಥಮಿಕ ಶಾಲೆಯಿಂದ ಪ್ರಾರಂಭವಾಯಿತು ಅದರೆ ಜೀವನದಲ್ಲಿ ಎಲ್ಲವೂ ಸುಗಮವಾಗಿರುವುದಿಲ್ಲ, ಮಂಗಳಮ್ಮನವರು ಕೆಲಸ ಮಾಡುತ್ತಿದ್ದ ಮನೆಗೆ ನೆಂಟರು ಬಂದಿದ್ದರು ಮನೆಯಲ್ಲಿದ್ದ ಬೆಲೆಬಾಳುವ ವಸ್ತುವೊಂದು ಕಾಣೆಯಾಗಿತ್ತು, ಅದರ ಆರೋಪ ಇವರ ತಲೆಗೆ ಬಿದ್ದಿತ್ತು, ಸರಿ ಈಕೆ ಎಷ್ಟು ಹೇಳಿದರೂ, ಬೇಡಿಕೊಂಡರೂ ನಂಬುವವರು ಬೇಕಲ್ಲ. ಬಡತನ ಆರೋಪಕ್ಕೂ ದಾರಿ ಅಲ್ಲವೇ? ಇವರೂ ಆ ಮನೆ ತ್ಯಜಿಸಿ ಹೊರಟರು ಮಗನನ್ನು ಓದಿಸುವುದಿರಲಿ, ಹೊಟ್ಟೆಗೇ ಕಷ್ಟವಿರುವಾಗ, ಮುಂದೇನು ಎಂಬ ಯೋಚನೆಯೇ ಹಗಲಿರುಳು, ಇವರ ಕಷ್ಟವರಿತ ಸಹೃದಯರೊಬ್ಬರು

ಊಟದ ಮನೆ ಮಾಡಲು ಸೂಚಿಸಿದರು. ಮೊದಲಿಗೆ ಬೇಕಾಗುವ ಬಂಡವಾಳವನ್ನೂ ಸಾಲದ ರೂಪದಲ್ಲಿ ನೀಡಿದರು. ಕಷ್ಟಪಡುವುದಕ್ಕೇನು ಇವರಿಗೆ ಹೇಳಿಕೊಡಬೇಕಾಗಿರಲಿಲ್ಲ, ಕಷ್ಟ ಪಟ್ಟಿದ್ದಕ್ಕೆ ಸರಿಯಾಗಿ ಫಲವೂ ಸಿಕ್ಕಿತು. ಮೊದಲು ಒಬ್ಬಿಬ್ಬರಿಂದ ಪ್ರಾರಂಭವಾಗಿದ್ದು ಕಾಲಕ್ರಮೇಣ ಬರುವವರ ಸಂಖ್ಯೆಯೂ ಹೆಚ್ಚಾಯಿತು. ಸಾಲವನ್ನೂ ತೀರಿಸಿದರು. ವಾಸಕ್ಕೆ ಬೇರೆ ದೊಡ್ಡ ಸ್ಥಳವನ್ನು ಹುಡುಕಿ, ಕೆಲಸಕ್ಕೆ ಎರಡು ಜನರನ್ನು ಸೇರಿಸಿಕೊಳ್ಳುವಷ್ಟು ಬೆಳೆಯಿತು. ಒಳಗೆ ಸೇರಿಕೊಂಡು ಅಡಿಗೆ ಮಾಡಿಕೊಡುವುದು ತಾಯಿಯ ಕೆಲಸ, ಉಳಿದೆಲ್ಲ ವ್ಯವಹಾರ ಮಗ ನೋಡಿಕೊಳ್ಳುತ್ತಿದ್ದನೆ ಈಗ. ಮಗನಿಗೆ ಬುದ್ಧಿ ತಿಳಿಯುವವರೆಗೂ ಎಲ್ಲ ವ್ಯವಹಾರವನ್ನೂ ಈಕೆಯೇ ನಡೆಸುತ್ತಿದ್ದರು. ಓದು, ಬರಹ ಬಾರದ ಈ ಮಹಿಳೆ ವ್ಯವಹಾರಕ್ಕನುಕೂಲವೆಂದು ಮಗನಿಂದಲೇ ಅಕ್ಷರಜ್ಞಾನ, ಲೆಕ್ಕಾಚಾರಗಳನ್ನು ಕಲಿತಿದ್ದರು. ಮಗನ ವಿದ್ಯಾಭ್ಯಾಸ ಅರ್ಧದಲ್ಲೇ ನಿಂತದ್ದು ಅವರಿಗೆ ಸರಿಯೆನಿಸದಿದ್ದರಿಂದ ಬೇರೆಡೆ ಮನೆಪಾಠ ಇಡಿಸಿ, ಖಾಸಗಿಯಾಗಿ ಓದಿ ಪದವೀಧರನಾಗುವಂತೆ ಮಾಡಿದ್ದಾರೆ. ಈಗಲೂ ತಾಯಿಯವರ ಸಲಹೆ, ಮಾರ್ಗದರ್ಶನಗಳು ಮಗನಿಗೆ ಬೇಕಾಗುತ್ತವೆ. ವಯಸ್ಸಾದ ಕಾರಣ ಮೊದಲಿನಂತೆ ಕೆಲಸ ಮಾಡಲಾಗದಿದ್ದರೂ ಊಟದ ರುಚಿ ಕೆಡಬಾರದು, ಹೆಸರು ಅಳಿಸಿಹೋಗಬಾರದೆಂದು ತಾವೇ ಅಡಿಗೆಯ ಜವಾಬ್ದಾರಿ ವಹಿಸಿ ಕೊಂಡಿದ್ದಾರೆ. ಮಗನಿಗೆ ತಾಯಿ ವಿಶ್ರಾಂತಿ ಪಡೆಯಲಿ ಎಂಬ ಆಶಯ ಆದರೆ ತಾಯಿಗೆ ವಿಶ್ರಾಂತಿಗಿಂತ, ವ್ಯವಹಾರ ಚೆನ್ನಾಗಿ ನಡೆಯಬೇಕು, ಬಂದವರಿಗೆ ರುಚಿಯಾದ ಅಡಿಗೆ ಬೇಕು, ತಮಗೂ ದುಡ್ಡಿನೊಂದಿಗೆ ಒಳ್ಳೆಯ ಹೆಸರು ಬೇಕು ಎಂದೇ ಶ್ರಮಿಸುತ್ತಿದ್ದಾರೆ.

ವರದಕ್ಷಿಣೆಯಂಥ ಅನಿಷ್ಟ ಪದ್ಧತಿಯಿಂದಾಗಿಯೋ ಅಥವಾ ಇತರೇ ಯಾವುದೇ ಸಮಸ್ಯೆಗಳಿಂದಾಗಿ ಗಂಡನಿಂದ ದೂರವಾಗುವ ಅಥವಾ ಮದುವೆಯಾಗದೆ ಒಂಟಿ ಜೀವನ ಸಾಗಿಸುವ ಮಹಿಳೆಯರಿಗೆ ಇಂತಹವರು ಮಾದರಿಯಾಗಬೇಕಲ್ಲದೇ ಆತ್ಮಹತ್ಯೆ ಇತ್ಯಾದಿಗಳು ಅವರ ಜೀವನದ ಹಕ್ಕನ್ನು ಕಸಿದುಕೊಳ್ಳಬಾರದು ಜೀವನದಲ್ಲಿ ಧೈರ್ಯ, ಏನು ಬೇಕಾದರೂ ಸಾಧಿಸಬಲ್ಲೆನೆಂಬ ಆತ್ಮವಿಶ್ವಾಸವಿದ್ದರೆ ಬಂಡೆಯಂಥ ಕಷ್ಟಗಳನ್ನೂ ಎದುರಿಸಿ ಗೆಲ್ಲಬಹುದು.

ಮಹಿಳೆಯರ ಮೇಲೆ ನಡೆಯುತ್ತಿರುವ ಅವ್ಯಾಹತ ಶೋಷಣೆಯನ್ನು ಕೊನೆಗೊಳಿಸಲು ಸ್ತ್ರೀಯರು ಆರ್ಥಿಕ ಸ್ವಾತಂತ್ರವನ್ನು ಗಳಿಸಲು ಪೂರಕವಾದ ವಾತಾವರಣ ಸೃಷ್ಟಿಸಲು ಸರ್ಕಾರ ಪ್ರಥಮ ಆದ್ಯತೆಯನ್ನು ನೀಡುತ್ತದೆಯೆಂದು ಶಿಕ್ಷಣ,ವಿಜ್ಞಾನ ಹಾಗೂ ತಾಂತ್ರಿಕತೆಯ ರಾಜ್ಯ ಮಂತ್ರಿ ಇತ್ತೀಚಿಗೆ ಲೋಕಸಭೆಯಲ್ಲಿ ತಿಳಿಸಿದ್ದಾರೆ.

೧೯೯೦ ಹೆಣ್ಣುಶಿಶುವಿನ ವರ್ಷವಾದ್ದರಿಂದ ಸರ್ಕಾರ ಲಿಂಗನಿರ್ಧಾರ ಪರೀಕ್ಷೆಯನ್ನು ನಿರ್ಬಂಧಗೊಳಿಸುವ ಉದ್ದೇಶದಿಂದ ಕೆಲವು ಕಾನೂನುಗಳನ್ನೇ ಮಾಡಿದೆಯೆಂದು ಹೆಣ್ಣು ಶಿಶುವಿನ ವರ್ಷವನ್ನು ಆಚರಿಸಲು ೧೭೫ ಕೋಟಿ ರೂ ಗಳನ್ನೇ ಮೀಸಲಿಡಲಾಗಿದೆಯೆಂದು ತಿಳಿಸಿದ್ದಾರೆ. ಇದು ಎಷ್ಟರ ಮಟ್ಟಿಗೆ ಕಾರ್ಯಾಚರಣೆಗೆ ಬರುತ್ತದೆ ಕಾದು ನೋಡಬೇಕು?

ಸಾರ್ಕ್ ರಾಷ್ಟ್ರಗಳು ೧೯೯೦ನ್ನು ಹೆಣ್ಣುಶಿಶುವಿನ ವರ್ಷವೆಂದು ಘೋಷಿಸಿದೆ. ಪ್ರಥಮದಿಂದಲೇ ಹೆಣ್ಣು ಪುರುಷನಿಗೆ ಸಮಾನಳೆಂಬ ತಿಳುವಳಿಕೆ ಮೂಡಿಸುವ ಉದ್ದೇಶದಿಂದ ಸಾಕ್ಷರತೆ ಬಗ್ಗೆ ಹೆಚ್ಚಿನ ಆಸಕ್ತಿ ಹರಿಸಲಾಗುತ್ತದೆ ಎಂದು ಭಾರತದ ಘನ ಸರ್ಕಾರ ತಿಳಿಸಿದೆ, ಆಸ್ತಿಯಲ್ಲಿ ಸಮಪಾಲು ನೀಡುವ, ಸ್ತ್ರೀಯರಿಗೆ ಚುನಾವಣೆಯಲ್ಲಿ ಮೀಸಲು ಕ್ಷೇತ್ರ ನೀಡುವ, ಮಹಿಳೆಯರಿಗೆ ರಕ್ಷಣೆ, ಭದ್ರತೆ ಒದಗಿಸುವ ಬಗ್ಗೆ ರಚನಾತ್ಮಕ ಕಾನೂನು, ಹೊಸ ಹೊಸ ಕಾರ್ಯಗಳನ್ನು ರೂಪಿಸಲಾಗುತ್ತಿದೆ ಎಂಬುದು ಸರ್ಕಾರದ ಹೇಳಿಕೆ. ಇದು ಕೇವಲ ಘೋಷಣೆಯಲ್ಲಿಯೋ, ಅಥವಾ ಕಾರ್ಯರೂಪದಲ್ಲೋ ಎಂದು ನೋಡಬೇಕು.

ಶ್ಯಾಮಲಾ ಸಂಚಯ

ಸಂ. ವಿಜಯಾ ದಬ್ಬೆ

ಪ್ರಕಾಶಕರು ; ಕರ್ನಾಟಕ ಲೇಖಕಿಯರ ಸಂಘ

ವಾಣಿ ಎಂದರೆ ಸಾಹಿತ್ಯವು, ಸಮಾಜದ ಹೃದ್ಗತವನ್ನೂ ಆಶೆಗಳನ್ನೂ ವಿಚಾರಗಳನ್ನೂ ತಿಳಿಸುವ ಸಾಧನವಾಗಿದೆ. ಅದಕ್ಕಾಗಿಯೆ ಜಗತ್ತು ವಾಕ್ ಸ್ವಾತಂತ್ರ್ಯ ಅನಪಹಾರ್ಯವಾದುದೆಂದು ಸಾರುತ್ತಿದೆ. ಅಂತಹ ವಾಕ್ ಸ್ವಾತಂತ್ರ್ಯವು ನಮ್ಮ ನಾರೀ ವರ್ಗಕ್ಕೆ ಇರಲೇ ಬೇಕು. ಪ್ರಪಂಚವನ್ನು ಸ್ತ್ರೀಯು ತನ್ನ ದೃಷ್ಟಿಯಿಂದ ನೋಡಿ ಅದರ ಬಗ್ಗೆ ಅವಳು ಅಭಿಪ್ರಾಯ ಪಡುವುದೇನು, ಅವಳ ಆಶೆ ಆಕಾಂಕ್ಷೆಗಳು ಯಾವ ರೀತಿಯಾಗಿವೆ, ಸಮಾಜ ಸುಧಾರಣೆಯ ವಿಷಯದಲ್ಲಿ ಅವಳ ವಿಚಾರಗಳೆಂತಿರುವುವು ಎಂಬುದನ್ನೆಲ್ಲಾ ಸಮಾಜವು ನೋಡುವುದವಶ್ಯ. ಹಿಂದೆ ಪ್ರಪಂಚದ ಬಗ್ಗೆ ವ್ಯಕ್ತವಾದ ಅಭಿಪ್ರಾಯ ಆಶೆಗಳೆಲ್ಲಾ ಹೆಚ್ಚಾಗಿ ಏಕಪಕ್ಷೀಯವಾದುವೆ. ಸಮಾಜಕ್ಕೆ ಸ್ತ್ರೀ ಎಂಬ ಇನ್ನೊಂದು ಕಣ್ಣಿದೆ: ಅದರಿಂದ ನೋಡಿದರೆ ಹೇಗೆ ಕಾಣುವುದು ಈ ಪ್ರಪಂಚ ಎಂಬುದನ್ನು ತಿಳಿದುಕೊಳ್ಳದೆ ಸಮಾಜ ನಿರ್ಮಾಣ ಕಾರ್ಯವು ಸಮಾಧಾನಕರವಾಗದು, ಅದು ಸಬಲವೂ ಆಗದು, ಪರಿಪೂರ್ಣವಾಗದು. ಈ ದೃಷ್ಟಿಯಿಂದ ಇಂದು ಸ್ತ್ರೀ ಸಾಹಿತ್ಯಕ್ಕೆ ಬಹಳ ಮಹತ್ವವಿದೆ. ಸ್ತ್ರೀಯು ಪ್ರಪಂಚದಲ್ಲಿ ತಕ್ಕ ಮನ್ನಣೆಯನ್ನು ಪಡೆಯಬೇಕು, ಸಮಾಜದ ಅರ್ಧ ಏಕೆ ಅರ್ಧಕ್ಕಿಂತ ಹೆಚ್ಚಿನ ಹೊಣೆಯನ್ನು ಹೊತ್ತಿರುವ ಅವಳಿಗೆ ಶಿಕ್ಷಣ – ಸ್ವಾತಂತ್ರ್ಯಾದಿಗಳ ಬಗ್ಗೆ ತಕ್ಕ ಹಕ್ಕು ಬಾಧ್ಯತೆಗಳು ಸಿಕ್ಕಬೇಕು ಎಂಬ ಆಶೆ ಆಕಾಂಕ್ಷೆಗಳನ್ನು ತಿಳಿಸುವುದಕ್ಕಾಗಿ ಈಗ ಅನೇಕ ವರ್ಷಗಳಿಂದ ಬೆಂಗಳೂರಿನ ಶ್ರೀಮತಿ ಆರ್. ಕಲ್ಯಾಣಮ್ಮನವರು 'ಸರಸ್ವತಿ' ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿರುವರು. ನಮ್ಮ ಹೆಣ್ಣುಮಕ್ಕಳು ಕವಿತೆಗಳನ್ನು ಕಟ್ಟಬಲ್ಲರು ಮತ್ತು ಕತೆಗಳನ್ನು ಹೆಣೆಯಬಲ್ಲರು, ವಿವಿಧ ವಿಷಯಕವಾದ ವಿಚಾರ ಪರಿಪ್ಲುತ ಲೇಖನಗಳನ್ನು ಬರೆಯಬಲ್ಲರು ಎಂಬುದು ಕರ್ನಾಟಕಕ್ಕೆ ಗೊತ್ತಾಗಿದೆ ಮತ್ತು ನನ್ನ ಪತಿಯೂ ನಾನೂ ಕೂಡಿ ನಡೆಸುತ್ತಿರುವ ಜಯಕರ್ನಾಟಕದಲ್ಲಿಯೂ ಅನೇಕ ಸ್ತ್ರೀಯರ ಕತೆಗಳೂ ಲೇಖಗಳೂ ಕಣ್ಣಿಗೆ ಬೀಳುತ್ತಿವೆ. ಇತರ ಅನೇಕ ಪತ್ರಿಕೆಗಳಲ್ಲಿಯೂ ಬರುತ್ತಿವೆ.

ಇಂದು ಸಾಹಿತ್ಯ ನಿರ್ಮಾಣದಲ್ಲಿ ಕತೆಗಳು ಹೆಚ್ಚಿನ ಸ್ಥಾನ ತೆಗೆದುಕೊಳ್ಳುತ್ತಿವೆ ಎಂದು ಹಿಂದೆ ಹೇಳಿದ್ದೇನಷ್ಟೇ. ಕತೆ, ನಾಟಕ, ಕಾದಂಬರಿ, ಪ್ರಹಸನ, ಹರಟೆ ಮೊದಲಾದವುಗಳೇ ಸಮಾಜದ ಹೆಚ್ಚು ಸ್ಪಷ್ಟವಾದ ಪ್ರತಿಬಿಂಬಗಳು ಸಮಾಜದ ಆಶೆ, ಆಕಾಂಕ್ಷೆ, ಸುಖ ದುಃಖಗಳ ಪಡಿನುಡಿಯೇ ಈ ಕತೆ ಮೊದಲಾದವು. ನಾನು ಮೊದಮೊದಲು ಹೇಳಿದಂತೆ ಲಲಿತ ಸಾಹಿತ್ಯದಲ್ಲಿ ಸ್ತ್ರೀ ವಾಣಿಗೆ ಆವಶ್ಯಕ ಮಹತ್ವವಿದೆ. ಸ್ತ್ರೀಯರು ಬಹುಕಾಲವನ್ನು ಪ್ರತ್ಯಕ್ಷ ಸಮಾಜ ಜೀವನದಲ್ಲಿ ಕಳೆಯುವವರಾದುದರಿಂದ ಜೀವನ ಸಂಗೀತವನ್ನು ನುಡಿಯುವುದಕ್ಕೆ ಅವರು ಪುರುಷರಿಗಿಂತ ಹೆಚ್ಚು ಅಧಿಕೃತರೆಂದು ಹೇಳಬಹುದು. ಸಣ್ಣಕತೆಗಳನ್ನು ಬರೆಯುವ ಕಲೆಯು ಸ್ತ್ರೀಯರಿಗೆ ಸ್ವಭಾವಸಿದ್ಧವಾಗಿರುವುದೆಂದೂ ಎಲ್ಲ ದೃಷ್ಟಿಗಳಿಂದ ತುಲನಾತ್ಮಕವಾಗಿ ನೋಡಿದರೆ ಸಮರ್ಪಕವಾದ ಸಹಜ ಸರಲ ಸುಂದರವಾದ ಕತೆಗಳನ್ನು ಬರೆಯುವುದರಲ್ಲಿ ಸ್ತ್ರೀಯರ ಪ್ರಮಾಣವೇ ಹೆಚ್ಚಾಗಿದೆ ಎಂದು ನನಗನಿಸುತ್ತದೆ. ಏಕೆಂದರೆ ಅವರ ಸಹಜಸಿದ್ಧ ಭಾಷೆಯಲ್ಲಿ ಜೀವನ ಸಂಗೀತವು ಮೈಗೂಡಿರುವುದು. ಕನ್ನಡ ಪತ್ರಿಕೆಗಳನ್ನೂ ಪುಸ್ತಕಗಳನ್ನೂ ಓದುತ್ತಿರುವವರಾದ ನೀವುಗಳು ಈ ಮಾತಿನ ಬಗ್ಗೆ ವಿಮರ್ಶಿಸಿಕೊಳ್ಳಬಹುದು, ನಿಮ್ಮ ಅಭಿಪ್ರಾಯವೂ ಹೀಗಾದೀತೆಂದು ನನ್ನ ಭರವಸೆ ಇದೆ.

"ಎಷ್ಟು ಸಾರಿ ಬದಲಾವಣೆಯ ಬಗ್ಗೆ ಹತ್ತಾರು ಭಾಷಣ ಮಾಡುವುದಾಗಲೀ, ಪುಟಗಟ್ಟಲೇ ಬರೆಯುವುದಾಗಲೀ ಸುಲಭವಾದರೂ ಆದೀತು ಆದರೆ ಬದಲಾವಣೆಯ ಸಂಕೇತವಾಗಿಯಾದರೂ ಚಿಕ್ಕ ಪುಟ್ಟ ಮನೆಗೆಲಸಗಳನ್ನು ಗಂಡಸರಿಂದ ಮಾಡಿಸುವುದು ಕಷ್ಟವಾದೀತು. ಅಲುಗಿಸಬೇಕಾಗಿರುವ ಈ ಮೂಲವೃಕ್ಷ ಎಂಥ ಹೆಮ್ಮರವೆಂಬುದು ನಮ್ಮ ಅನುಭವಕ್ಕೆ ಬರುವುದು ಇಂಥ ಸಂದರ್ಭಗಳಲ್ಲಿಯೇ"

— ಡಿ. ವಿಜಯಾ.

ಅಕ್ಕ-ಪಕ್ಕ

ನನಗೆ ಚಡಪಡಿಕೆ ಶುರುವಾದಾಗಲೆಲ್ಲ ಎಲ್ಲೋ ದೂರದಲ್ಲಿ ಖಂಜರಿಯ ಜತೆ ಕೊಳಲನ್ನು ನುಡಿಸುತ್ತಿದ್ದ ಶಬ್ದ ಕೇಳುತ್ತಿತ್ತು. ಆಗೆಲ್ಲ ನಾನು ಒಬ್ಬ ಹುಚ್ಚಿಯಂತೆ ಆ ನಾದದ ಜೆನ್ನು ಹತ್ತಿ ಮನೆಯಿಂದ ಓಡುತ್ತಿದ್ದೆ........... ಆದರೆ ನಾನು ಹುಚ್ಚಿಯಾಗಿರಲಿಲ್ಲ, ಕೃಷ್ಣನ ಹುಚ್ಚು ಹಿಡಿದಿತ್ತಷ್ಟೆ.

ತೇಜನ್‌ಬಾಯಿ

'ಪಾಂಡವಾನಿ' ಶೈಲಿಯ ಪ್ರಸಿದ್ಧ ಕೀರ್ತನಕಾರ್ತಿ

ನಾನು ಪರಿಸರವಾದಿ ಎಂದು ಕರೆಸಿಕೊಳ್ಳಲು ಇಷ್ಟಪಡುತ್ತೇನೆ. ಆದರೆ ನನ್ನನ್ನು ಲೇಬಲ್ಲುಗಳಲ್ಲಿ ಕತ್ತರಿಸಿ ಇಡಲು ಸಾಧ್ಯವಿಲ್ಲ– ಬರಹಗಾರ್ತಿ, ರಾಜಕಾರಿಣಿ ಅಥವಾ ಇನ್ನೇನೋ ಹೆಸರು ಹಚ್ಚಲು ಸಾಧ್ಯವಿಲ್ಲ. ಒಬ್ಬ ಪ್ರಜೆ ಅಂದರೆ ಸಾಕು.

ಮೇನಕಾ ಗಾಂಧಿ

ಕೇಂದ್ರದ ಪರಿಸರ ಖಾತೆ ಸಚಿವೆ.

ಕಲಾತ್ಮಕ ಚಿತ್ರಗಳ ಬಗ್ಗೆ ಒಳ್ಳೆಯದೇನೆಂದರೆ ನೀವು ಕೃತಕ ಸ್ತನಗಳನ್ನು ಕಟ್ಟಿಕೊಳ್ಳಬೇಕಾದ್ದಿಲ್ಲ.

ದೀಪ್ತಿ ನವಲ್

ಚಿತ್ರನಟಿ.

ಬಸ್ಸಿನಲ್ಲಿ 'ಹೆಂಗಸರು' ಎಂಬ ಬರಹ ಬರೆಸಿ ಕೆಲವು ಪೀಠಗಳನ್ನು ಮೀಸಲಿಟ್ಟಿರುತ್ತಾರೆ ಆದರೆ ಗಂಡಸರು ಸ್ಥಳ ಸಿಕ್ಕರೆ ಸಾಕು ಯಾವ ಸಂಕೋಚವೂ ಇಲ್ಲದೆ ಅಲ್ಲಿ ಆಸೀನರಾಗುತ್ತಾರೆ 'ಹೆಂಗಸರು' ಎಂಬ ಪದ ಅರ್ಥವಾಗದೇ ಗಂಡಸರು ಈ ಕೃತ್ಯ ಮಾಡಬಹುದು.

ನಾನಾ ಕೊಳ್ಳೆಗಾಲ

ಪ್ರಜಾವಾಣಿ

ಅಸಂಘಟಿತ ಕ್ಷೇತ್ರದಲ್ಲಿರುವ ಸ್ವಯಂ ಉದ್ಯೋಗಿ ಮಹಿಳೆಯರ ಕೌಶಲ್ಯವನ್ನು ಬದಲಾಗುವ ಕಾಲಕ್ಕೆ ತಕ್ಕಂತೆ ಹೆಚ್ಚಿಸದಿದ್ದಲ್ಲಿ ಈ ಮಹಿಳೆಯರ ಸ್ಥಿತಿಗತಿ ಸುಧಾರಿಸುವುದಿಲ್ಲ.

ಡಾ|| ಕೆ. ಯು. ಮಾಡ

ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್‌ನ ಕಾರ್ಯಕಾರಿ ನಿರ್ದೇಶಕ.

ಭಾರತದಲ್ಲಿ ಭಾರತೀಯ ಮಹಿಳೆ ಇಲ್ಲವೇನೊ. ಹಿಂದೂ ಮಹಿಳೆ, ಕ್ರಿಶ್ಚಿಯನ್ ಮಹಿಳೆ, ಮುಸ್ಲಿಂ ಮಹಿಳೆ, ಗುಡ್ಡಗಾಡು ಮಹಿಳೆ ಹೀಗೆ ತಮ್ಮದೇ ಆದ ಪ್ರತ್ಯೇಕ ಶಾಸನ, ಸಂಹಿತೆಗಳಿಗೆ ಒಳಪಟ್ಟ ವರ್ಗಗಳೇ ಇವೆಯೇನೋ. ಇಷ್ಟಾದರೂ ನಾವು ಭಾರತೀಯತೆ, ಏಕತೆ, ರಾಷ್ಟ್ರೀಯ ಸ್ವರೂಪ ಮುಂತಾದವುಗಳ ಬಗ್ಗೆ ಮಾತನಾಡುತ್ತಿರುವುದೇ ಒಂದು ವಿಪರ್ಯಾಸ.

ಕಮಲಾ ಮಂಕೇಕರ್

ಪತ್ರಕರ್ತೆ.

ಈಗ ಗಂಡ ಹಣಕಾಸು ಸಚಿವ ಎಂದ ಮಾತ್ರಕ್ಕೆ ಬಾಯಿ ಮುಚ್ಚಿಕೊಂಡು ಸುಮ್ಮನಿರುವುದು ತಪ್ಪಲ್ಲವೇ? ನನ್ನ ಅಂತರಾತ್ಮ ಒಪ್ಪಬೇಕಲ್ಲ. ...... ನನ್ನ ಪ್ರತಿಭಟನೆ ಗಂಡನ ವಿರುದ್ಧ ಖಂಡಿತಾ ಅಲ್ಲ: ಹಣಕಾಸು ಸಚಿವರ ವಿರುದ್ಧ.

ಪ್ರಮೀಳ ದಂಡವತೆ

ಕೇಂದ್ರ ಹಣಕಾಸು ಸಚಿವ ಮಧು ದಂಡವತೆ ಪತ್ನಿ

ಪ್ರತಿದಿನ 8 ಗಂಟೆಗೂ ಹೆಚ್ಚು ಕಾಲ ಸೇವೆ ಮಾಡಿಸಿಕೊಂಡು ಗೌರವ ಕಾರ್ಯಕರ್ತೆಯರೆಂದು ಹೇಳಿ ಅಂಗನವಾಡಿ ಕೆಲಸಗಾರರನ್ನು ಜೀತದಾಳುಗಳಂತೆ ದುಡಿಸಿಕೊಳ್ಳುವ ಪದ್ಧತಿ ನಿಲ್ಲಬೇಕು.

ಜಿ. ಆರ್. ಶಿವಶಂಕರ್.

ರಾಜ್ಯ ಅಂಗನವಾಡಿ ಕಾರ್ಯಕರ್ತರ ಮಹಾಮಂಡಲಿ ಅಧ್ಯಕ್ಷ.

ಮೂಲಭೂತವಾಗಿ ನಾನು ಜನರ ಗಾಯಕಿ. ನನ್ನ ಹಾಡುಗಳಲ್ಲಿ ಅಂತರ್ಗತವಾಗಿರುವ ಸಂದೇಶವೆಂದರೆ ಸಾಹಚರ್ಯೆ.

ಉಷಾ ಉತುಪ್

ಪಾಪ್ ಗಾಯಕಿ

ಕೇವಲ ಖ್ಯಾತಿ ಮತ್ತು ವೈಭವಗಳು ನನ್ನನ್ನು ಬದಲಾಯಿಸಲಾರವು. ಕಲ್ಕತ್ತೆಗೆ ನೀವು ಬಂದು ನೋಡಿ, ನಾನು ಅದೇ ಹಿಂದಿನ ಸರಳ ರೂಪಾ ಗಂಗೂಲಿ.


ರೂಪಾ ಗಂಗೂಲಿ,

16ನೇ ಪುಟದಿಂದ

ಮಾಡಿದ ಮದುವೆಗೆ ಮುದುರಿದ ಮನದಿಂದಲೇ ಸಹಕರಿಸಿದಳು ಅವಳ ಅದೃಷ್ಟಕ್ಕೆ ಆಕೆಯ ಪತಿ ಒಳ್ಳೆಯ ಗುಣದವ. ಆಕೆಯನ್ನು ಚೆನ್ನಾಗಿ ನೋಡಿಕೊಂಡಿದ್ದಾನೆ. ಆತ್ಮಹತ್ಯೆಗೆ ಯತ್ನಿಸಿದ್ದು ಯಶಸ್ವಿಯಾಗಿದ್ದಿದ್ದರೆ ಆಕೆ ಏನು ಸಾಧಿಸಿದಂತಾಗುತ್ತಿತ್ತು. ಆ ಕಳ್ಳ ಪ್ರೇಮಿಯಂತೆ ಇಂದಿಗೂ ಬಹಳಷ್ಟು ಮಂದಿ ಪ್ರೇಮದ ನಾಟಕದಲ್ಲಿ ತೊಡಗಿದ್ದಾರೆ.

ಹೆಣ್ಣೆಂದರೆ ಅವರ ಕೈಯಾಟದ ಗೊಂಬೆಗಳಲ್ಲ. ಅವರಿಗೂ ಮನಸ್ಸಿದೆ ಎಂದು ತಿಳಿದುಕೊಳ್ಳಬೇಕು. ಹೀಗೆ ಹೆಣ್ಣಲ್ಲಿ ಪ್ರೀತಿ ಮೂಡಿಸಿ ಅವಳನ್ನು ಪ್ರೀತಿಸಿ ಕೈ ಬಿಡುವ ಗಂಡಸರು ಮನುಷ್ಯರಲ್ಲ, ಅವರನ್ನು ರಾಕ್ಷಸರೆಂದು ಕರೆದರೂ ಏನೂ ಪಾಪ ಬರುವುದಿಲ್ಲ. ಅಂತಹ ಗಂಡಸರನ್ನು ಕೆಟ್ಟ ವಿಷ ತುಂಬಿರುವ ಹಾವುಗಳೆಂದು ಕರೆಯಬಹುದು. ಇಂತಹವರಿಗೆ ಪ್ರೀತಿ— ಪ್ರೇಮವೆನ್ನುವುದು ಗೊಂಬೆಯ ಆಟವಾಗಿದೆ. ಪ್ರೀತಿಸುವುದು ಎಂದರೆ ನಾಲ್ಕು ದಿನ ಒಟ್ಟಿಗೇ ಓಡಾಡಿ, ಕಾಲ ಕಳೆದರಾಯ್ತು, ಒಬ್ಬಳಾದ ಮೇಲೆ ಇನ್ನೊಬ್ಬಳು, ನಂತರ ಮಗದೊಬ್ಬಳು ಹೀಗೇ ನಡೆಸಿದರಾಯ್ತು. ಮದುವೆಯ ಯೋಚನೆಯೇ ಇಲ್ಲ, ಆದರೆ ಹೆಣ್ಣಿನ ಬಾಳು? ಅವಳ ವ್ಯಕ್ತಿತ್ವ, ಭಾವನೆಗಳಿಗೆ ಆದರ ಸಿಗುವಂತಾಗಬೇಕು. ಅವಳಿಗೂ ಗೌರವ ನೀಡಬೇಕೆಂಬ ಮನೋಭಾವ ಬೆಳೆಸಿಕೊಳ್ಳಬೇಕಾದ ಅಗತ್ಯವಿದೆ ಇಂದು.

ನಜಹತ್ ಷಾಹೀನ್.
ಕಾಡುಗುಡಿ.



ಸಂವೇದನೆ



ಹಗಲು ಕಂಡ ಬಾವಿಗೆ

"ಅಪ್ಪಾ, ನನಗೆ ಶಾಲೆಗೆ ಕಳಿಸು"

"ಬೇಡಮ್ಮ, ಮನೇಲಿರು .... ಓದಿದರೆ ತೊಂದರೆ .... ನಮ್ಮ ಜಾತೀಲಿ ಯಾವ ಹೆಂಗಸೂ ಹಾಗೆ ಶಾಲೆಗೆ ಹೋದದ್ದಿಲ್ಲ" ಎಂಬ ತಂದೆಯ ಬುದ್ಧಿವಾದ.

"ಶಂಕ್ರೂ, ಶಾಲೆಗೆ ಹೋಗ್ತಾನಲ್ಲ, ನಾನೂ ಹೋಗುತ್ತೇನೆ" ಎಂದು ಹಟ ಮಾಡಿದ ಮಗಳು ಮಾದಮ್ಮನಿಗೆ "ಬ್ಯಾಡವ್ವಾ .... ಶಂಕ್ರಾ ಗಂಡಸು ಮಗಾ, ಅವಾ ಗಂಡಾದ್ದೇ ದೊಡ್ಡದಲ್ಲೇನವ್ವಾ...."

ಮಾದವ್ವ ಹಟಮಾಡಿ ಅಂತೂ ಶಾಲೆಗೆ ಸೇರಿದಳು. ಕನಿಷ್ಠ ನಾಲ್ಕು ಮನೆಗಳ ಮುಸುರೆ – ಬಟ್ಟೆ ಕೆಲಸ ಮುಗಿಸಿ. ಮನೆಯ ಕೆಲಸ ಮುಗಿಸಿ ಉಳಿದ ವೇಳೆ ಏನಿದ್ರೂ ಶಾಲೆ-ಗೀಲೆ .... ಕಂಡೀಷನ್ನುಗಳಿಗೆಲ್ಲ ಒಪ್ಪಿ ಮನೆಗೆಲಸದ ಮನೆಯೊಡತಿಯರ ಮನವೊಲಿಸಿ ಕೆಲಸದ ಸಮಯಗಳನ್ನ ಹೊಂದಿಸಿಕೊಂಡು ಅಂತೂ ಮಾದಿ ಶಾಲೆಗೆ ಹೋಗಿ ಬಂದಳು!

ವಂಶದಲ್ಲೇ ಒಬ್ಬರೂ ಅಕ್ಷರಸ್ಥರಲ್ಲ. ಮಾದಿಯೂ ಅಪ್ರತಿಮ ಪ್ರತಿಭಾವಂತೆ ಅಲ್ಲ. ಅಂಥವರಿಗೆ ರ್‍ಯಾಂಕ್ ಹ್ಯಾಗಿರಲಿ ||| ನಂಬರ್ ಬಂದು ಪಾಸ್ ಆದರೆ ಅದೇ ಗೌರಿಶಂಕರ ಏರಿದ ಸಾಹಸ, ಅಂತೂ ಮಾದಿ ಹಟಮಾಡಿ, ಮನವೊಲಿಸಿ, ಹೇಳಿದ್ದೆಲ್ಲ ಮಾಡಿ

ಕೊಟ್ಟು ಎಸ್. ಎಸ್. ಎಲ್. ಸಿ.ವರೆಗೂ ಬಂದೇಬಿಟ್ಟಳು. ಮುಂದೆ ಓದೂ ಸಾಗಲಿಲ್ಲ. ಅವಳಿಗೂ ಓದುವ – ಗ್ರಹಿಸುವ ಈ ಕೆಲಸ ...... ಒಂದು ಕಷ್ಟಕರ ವ್ಯಾಯಾಮ ಅನ್ನಿಸಿ ರೋಸಿ ಹೋಗಿತ್ತು ಮಾದಿಗೂ ಕೂಡಾ.

ಪುಟ್ಟದೊಂದು ಕೆಲಸ ಸಂಪಾದಿಸಿ ಮನೆಗೆಲಸಕ್ಕಿಂತ ಕೊಂಚ ಹೆಚ್ಚು ಸಂಪಾದಿಸುತ್ತಿದ್ದ ಮಾದಿ, ಹೊರ ಪ್ರಪಂಚದ ಪರಿಚಯ ಪಡೆದ ಮೇಲೆ ಕೊಂಚ ನಾಜೂಕು – ಯೋಚಿಸುವ ರೀತಿ – ಆತ್ಮಾಭಿಮಾನದಂಥದನ್ನು ಅರ್ಥಮಾಡಿಕೊಂಡು ಬಿಟ್ಟಿದ್ದಳು. ಮಾದಿಯ ಅಪ್ಪ ವರಗಳ ಶೋಧದಲ್ಲಿ ತೊಡಗಿದ್ದ. "ಈ ಮಾದಿ ಅಕ್ಸರ ಕಲಿತುದ್ದು ಭಾಳಾ ಪ್ರಾಣ ಸಂಕಟ ಆತು. ಯಾರಿಗೂ ಈ ಎಣ್ಣೆ ಬ್ಯಾಡಾತು" ಎಂದು ಗೊಣಗ ತೊಡಗಿದ.

ಮಾದಿ "ಹೋಗ್ಲಿ ಮದ್ವೆನೇ ಬೇಡ " ಅಂದಳು ಮದುವೆ ಬೇಡ ಎಂಬುದೇ ನಿರ್ಧಾರವಾಗಲು ಬೇರಾವ ಮಹತ್ವಾಕಾಂಕ್ಷೆಯೂ ಕಾರಣವಲ್ಲ. ಅಪ್ಪ ತರುತ್ತಿದ್ದ ವರಗಳ ಮಾಹಿತಿ — ಅವರು ಮಾಡುತ್ತಿದ್ದ ಕೆಲಸಗಳು ಆ ವೇಳೆಗೆ ಬೇಡವಾಗಿದ್ದವು. ಅದೇ ಅಭಿಪ್ರಾಯ ಕೇಳುವುದಕ್ಕೂ ಮೊದಲೇ ಆ "ವರ"ಗಳೇ "ಓದ್ಕಂಡವ್ಳಂತೆ .... ಇವ್ಳೆಂತ ಬಾಳೇವು ಮಾಡ್ಯಾಳು .... ಆಪೀಸಿಗೆ ಬೇರೆ ಓತಾಳಂತೇ" ಎಂದು ಗೊಣಗುತ್ತ "ಒಲ್ಲೆ" ಎಂದು ಬಿಡುತ್ತಿದ್ದರು. ಅಂತೂ ಮಾದಿಗೆ ಆ ಕ್ಷಣಕ್ಕೆ ಬಿಡುಗಡೆಯ ನಿಟ್ಟುಸಿರು ಬಂದರೂ, ಅಪ್ಪನ ಗೊಣಗು — ಅಮ್ಮನ ಅಳು ನೋಡಿದಾಗ ಹೊಟ್ಟೆಯಲ್ಲಿ ಸಂಕಟವಾಗುತ್ತಿತ್ತು.

ಮಾದಿ ಕೂಡಾ ಹೆಣ್ಣು ತಾನೇ ...... ಅವಳಿಗೂ ಮದುವೆ .... ಸುಂದರನಾದ ಗಂಡ, ಅವನೊಂದಿಗೆ ತಿರುಗಾಟ, ಎಲ್ಲ ಕನಸುಗಳೂ ಇದ್ದವು. ಅವಳ ಅಪೇಕ್ಷೆ — ಆಸೆಗಳೆಲ್ಲ ಅವಳಿದ್ದ, ಬೆಳೆದ ವಾತಾವರಣದಲ್ಲಿ ಅನೂಚಾನವಾಗಿ ನಡೆದು ಬಂದ ರೀತಿಗಿಂತ ಕೊಂಚ ಮೇಲು ಮಟ್ಟದವಾಗಿದ್ದವು ಎಂಬುದೊಂದೇ ಅಲ್ಲಿದ್ದ ತೊಡಕು.

ಹೇಳಲಾರದೆ, ಸಹಿಸಲಾರದೆ ಮಿಡುಕುತ್ತಿತ್ತು ಹುಡುಗಿ. ಈ ಮಧ್ಯೆ ತಮ್ಮ ಶಂಕ್ರಯ್ಯ ಓದು ತಲೆಗೆ ಹತ್ತದೆ ಪೋಲಿ ಪಟಾಲಂ ಕಟ್ಟಿಕೊಂಡು ತಿರುಗುತ್ತಾ, ದಿನಕ್ಕೊಂದು ದೂರು ತರುತ್ತಿದ್ದರೂ ಅಪ್ಪನಿಗೆ ಬೇಜಾರಿಲ್ಲ "ಅವ....ಗಂಡ್ಸುಮಗಾ ಆಡದ್ದೇ ವರ ಕಣವ್ವಾ ...." ಅಂದು ಬಿಡುತ್ತಿದ್ದ. ಮಾದಿ ತರುತ್ತಿದ್ದ ಮನೆಗೆಲಸದ ಕೆಲವು ಹತ್ತುಗಳು. "ಆಫೀಸಿ"ನ ೨, ೩ ನೂರುಗಳು ಹೆತ್ತವರಿಗೆ ದೊಡ್ಡದಾಗಲೇ ಇಲ್ಲ. ಏನೂ ತರದೆ ತಿಂದು ತಿರುಗುವ ಮಗನೇ ದೊಡ್ಡವನು ಅವರಿಗೆ.

ಅಂತೂ ಮಾದಿಗೆ ಒಂದು ವರ ಸಿಕ್ಕೇಬಿಟ್ಟ. ೨ನೇ ಕ್ಲಾಸ್ ಓದಿದ್ದ! "ಅಬ್ಬಾ, ನಮ್ಮ ಜಾತೀಲೆ ಯಾರೂ ಹಿಂಗೆ ಓದ್ದೋರಿಲ್ಲ. ಉಡ್ಗ ಓದ್ಕಂಡವ್ನೆ" ಎಂಬ ಹೆಗ್ಗಳಿಕೆ. ಮಾದಿ ಮನೆಗೆಲಸ ಮಾಡುತ್ತಿದ್ದ ಮನೆಯ ಯಜಮಾನಿ "ಏನು ಮಾಡ್ತೀರಿ ಮಗಳಿಗೆ .... ಸೀರೆ, ಒಡವೆ" ಅಂತ ಕೇಳಿದರೆ, — "ಎಲ್ಬಂತ್ರಾ .... ಯಾಕ್ರಾ, ಅವೆಲ್ಲ .... ವರ ತಂದು ಕೊಟ್ಟದ್ದೇ ವಡವೆ ಅಲ್ಲವ್ರಾ? ಹುಡುಗನ್ಗೇಂತ ಒಂದೈನೂರು ಸಾವ್ರ ಕೊಟ್ಟೋ ...." ಅಂದಿದ್ದ ಅಪ್ಪ.

ಸದಾ ದುಡಿಯುತ್ತ ಕಾಸಿಗೆ ಕಾಸು ಸೇರಿಸಲು ಹೆಣಗುತ್ತಿದ್ದ ತನ್ನ ಮಡದಿಗೂ ಆ ತಂದೆ ಹೀಗೇ ಹೇಳುತ್ತಿದ್ದ "ಕಾಸು ಮುಖ್ಯ ಅಲ್ಲ ಕಣೇ ಕೆಂಚೀ.... ನಾನು .... ನಾನು ಮುಖ್ಯ ನಿಂಗೇ. ನನ್ನ ಸರ್ಯಾಗಿ ನೋಡ್ಕೋಬೇಕು......." ಅಂತ, ತಾನು ಸಂಪಾದಿಸದೆ ತಿರುಗ್ತಾ ಕಾಲವನಾಗಿ, ಅದೇ ಪರಂಪರೆ ಉಳಿಸಿದ ಮಗನಿಗೆ ಶಾಮೀಲು ಆಗುತ್ತ, ಕತ್ತೆಗಳ ಹಾಗೆ ಹಗಲಿರುಳು ದುಡಿಯುವ ತಾಯಿ — ಮಗಳ ಗಳಿಕೆಯಿಂದ ತಿಂದ್ಕೂ ತೇಗಿ — ಮಜಾ ಉಡಾಯಿಸಿದರೂ ಅವನಿಗೆ ತಾನು "ಗಂಡು" ಎಂಬುದೇ ಮುಖ್ಯವಾಗಿತ್ತು.

ಮಾದಿಯು ಮದುವೆ ಆಗಿರುತ್ತೆ. ಹೇಗೋ ಅವಳೂ ಸಂಸಾರ ಮಾಡಿರುತ್ತಾಳೆ. ಅವಳ ಅಪ್ಪನ ಥರದ ಇನ್ನೊಂದು ಗಂಡಸಿನ ಜತೆಗೆ. ಅವಳ ಬದುಕಿನಲ್ಲಿ ತುಂಬ ಬೇರೆಯಾದ ಬದಲಾವಣೆಯಂತೂ ಆಗಿರುತ್ತದೆಂದು ಹೇಳಲಾರೆ. ಗಂಡ — ಮತ್ತವರ ಮನೆಯವರು ಅವಳನ್ನ, ಅವಳ ಅಕ್ಷರಜ್ಞಾನವನ್ನ ಇನ್ನಷ್ಟ

ಮೊದಲಿಸಿದ್ದಾರು .... ನಾಲ್ಕರ ಬದಲು ಎಂಟು ಮನೆಯ ಮುಸುರೆ ಕೆಲಸ ಅವಳು ಮಾಡಿರಬಹುದು.....

ನನಗೆ ಅಚ್ಚರಿ ಅನ್ನಿಸುವುದು ಮಾದಿಯ ತಂದೆ ಮತ್ತು ಅವರ ಸುತ್ತಲ ಅವರ ಜನರ ಮಾತಿನ ನವಿರುತನಕ್ಕೆ.

ಮಧ್ಯಮ ವರ್ಗದ ಮೌಲ್ಯಗಳು ಬಹುತೇಕ ಸ್ತ್ರೀಯರ ಬದುಕನ್ನು ಕಿತ್ತುಕೊಂಡಿವೆ, ಅಲ್ಲಿ ಪತಿ— ಪುರುಷ ಇತ್ಯಾದಿಯಾದ ವಿಚಿತ್ರ ಹೇಳಿಕೆಗಳಿವೆ. ಈ ಮೌಲ್ಯಗಳು ಆಕೆಗೆ ಮಾರಕವಾಗುತ್ತಿವೆ ಎಂಬತ್ತ ಚಿಂತನೆ ನಡೆಸಿರುವಾಗಲೇ, ಆ ಪ್ರಮಾಣದಲ್ಲಿ ಜೀವನ ವಿಧಾನ "ಕಲಬೆರಕೆ" ಆಗಿಲ್ಲ. ಮೇಲ್ಜಾತಿ, ವರ್ಗದ ವರಿಂದ ಶೋಷಣೆ ಇದೆ, ಅದರ ವಿರುದ್ಧ ಹೋರಾಟ ಎಂದು ನಾವು ಭಾವಿಸಿರುವಾಗ ಇನ್ನೊಂದು ವರ್ಗ— ಜಾತಿಗಳಲ್ಲಿ ಆಗುತ್ತಿರುವ ಬದಲಾವಣೆಯ ಪರಿಣಾಮವೆ ಇದು? ಅವರು ಮಧ್ಯಮ ವರ್ಗದ ಸವಕಲು ಮೌಲ್ಯಗಳನ್ನು ಒಪ್ಪಿಕೊಂಡು ಆದರ್ಶ ಮಾಡಿಕೊಳ್ಳ ತೊಡಗಿದ್ದಾರೆಯೇ .... ಎತ್ತ ಸಾಗುತ್ತಿದೆ ಸಮಷ್ಟಿಯ ಚಿಂತನೆ, ಆಶಯಗಳು ಎಂದು ಕೇಳಿಕೊಳ್ಳುವಂತಾಗಿದೆ.

ಹಿಂದು ಬದಲಾವಣೆ — ಪ್ರಗತಿ — ಸಮಾನವಾದ ಬದುಕು ಎಂಬ ನಮ್ಮೆಲ್ಲ ಆಲೋಚನೆಗಳು — ಅದಕ್ಕಾಗಿ ತೆಗೆದುಕೊಳ್ಳುವ ಕ್ರಮದ ಜತೆಗೇ ಈ ಮೌಲ್ಯಗಳ ವರ್ಗಾವಣೆಯತ್ತಲೂ ಗಮನ ಹರಿಸದೇ ಹೋದರೆ ಪರಿಣಾಮ ಹಗಲು ಕಂಡ ಬಾವಿಯಲ್ಲಿ ಇರುಳು ಬಿದ್ದಂತೆ ಆದೀತು.

ವಿಜಯಾ.

O O O

ಓದುಗರಲ್ಲಿ ಮನವಿ

ಶತಮಾನಗಳಿಂದ ತುಳಿತಕ್ಕೊಳಗಾದ ಸ್ತ್ರೀಯರ ಧ್ವನಿಯಾದ "ಮಾನಸ" ಪತ್ರಿಕೆಯನ್ನು ಕ್ರಮವಾಗಿ ಪ್ರಕಟಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ಪ್ರಾರಂಭಿಸಿದರೂ, ಆರ್ಥಿಕ ಕಾರಣಗಳಿಂದಾಗಿ ಪತ್ರಿಕೆಯನ್ನು ಕ್ರಮವಾಗಿ ಪ್ರಕಟಿಸಲು ಸಾಧ್ಯವಾಗದೆ ಇರುವುದನ್ನು ನೀವು ಈದಾಗಲೇ ಗಮನಿಸಿರಬಹುದು.

ನಮ್ಮೆಲ್ಲರ ಪ್ರಾಮಾಣಿಕ ಪ್ರಯತ್ನವನ್ನು ಮೀರಿ ಅಡಿಗಡಿಗೆ ಎದುರಾಗುವ ಸಮಸ್ಯೆಯಿಂದಾಗಿ ಪತ್ರಿಕೆ ತುಂಬಾ ವಿಳಂಬ ಗತಿಯಲ್ಲಿ ಪ್ರಕಟವಾಗುತ್ತಿದೆ. ಪತ್ರಿಕೆಯ ವೆಚ್ಚವನ್ನು ಕಡಿಮೆಗೊಳಿಸುವ ಉದ್ದೇಶದಿಂದ ಒಂದು ಪುಟ್ಟದಾದ ಅಚ್ಚುಮೊಳೆಯ ಕೇಂದ್ರವನ್ನು ಈದಾಗಲೇ ಪ್ರಾರಂಭಿಸಿದ್ದೇವೆ. ಇದರ ಖರ್ಚು ವೆಚ್ಚಗಳೊಂದಿಗೆ ಬಾಡಿಗೆಗೆ ಹಣ ಹೊಂದಿಸುವುದು ದುಸ್ತರವಾಗುತ್ತಿದೆ. ಈ ಹಂತದಲ್ಲಿ ಪತ್ರಿಕೆಯ ಆತ್ಮೀಯ ಹಿತೈಷಿಗಳಾದ ನಿಮಗೆ ಈ ಕೆಳಗಿನ ಕಳಕಳಿಯ ಮನವಿಯನ್ನು ಮಾಡುತ್ತಿದ್ದೇವೆ. ಪ್ರತಿ ತಿಂಗಳೂ ಮಾನಸ ಆಫೀಸ್ ಬಾಡಿಗೆಗೆಂದು ರೂ. ೫-00 ಕಳುಹಿಸಲು ಸಾಧ್ಯವೆ? ಪ್ರತಿ ತಿಂಗಳೂ ಕಳುಹಿಸುವುದು ಸಮಸ್ಯೆಯೆನಿಸಿದರೆ, ಅರ್ಧವರ್ಷದ ಅಂದರೆ ೩0-00 ರೂ. ಅಥವಾ ಒಂದು ವರ್ಷದ ರೂ. ೬0-00 ಒಟ್ಟಿಗೆ ಕಳಿಸಬಹುದು. ನಮ್ಮ ಈ ಕಿರು ಪ್ರಯತ್ನಕ್ಕೆ ನಿಮ್ಮ ಬೆಂಬಲ ಮತ್ತು ಪ್ರೋತ್ಸಾಹವಿದೆಯೆಂಬ ಭರವಸೆ ನಮಗಿದೆ.

ಸುದ್ದಿ ಸಂಕಲನ

ಮಹಿಳಾ ಕೈದಿ

ಜೈಲಿನಲ್ಲಿರುವ ಮಹಿಳೆಯರಿಗೆ ಕಿರುಕುಳ ತಪ್ಪಿಸುವ ದೃಷ್ಟಿಯಿಂದ ಕೋಡ್ ಆಫ್ ಕ್ರಿಮಿನಲ್ ಪ್ರೊಸೀಜರ್‌ನಲ್ಲಿ ಸೂಕ್ತ ಅವಕಾಶಗಳನ್ನು ಕಲ್ಪಿಸಬೇಕು ಎಂದು ಕಾನೂನು ಆಯೋಗ ಕರೆ ನೀಡಿದೆ. ಕ್ರಿಮಿನಲ್ ಪ್ರೊಸೀಜರ್ ಕೋಡ್‌ನಲ್ಲಿ ಈಗಿರುವಂತೆ ಪ್ರತಿಯೊಂದು ಅವಕಾಶಗಳನ್ನು ತಿದ್ದುಪಡಿ ಮಾಡುವ ಮೂಲಕ ಈ ಉದ್ದೇಶ ಸಾಧಿಸಿದಂತೆ ಆಗುವುದಿಲ್ಲ ಎಂದು ಆಯೋಗ ತಿಳಿಸಿದೆ. ಇದಕ್ಕಾಗಿ ಹೊಸ ಅಧ್ಯಾಯವನ್ನೇ ಸೇರಿಸುವುದು ಒಳಿತು ಎಂದು ಅದು ಅಭಿಪ್ರಾಯ ಪಟ್ಟಿದೆ.

ಮಹಿಳೆಗೆ ಆಸ್ತಿ ಹಕ್ಕು

ಮಹಿಳೆಗೆ ಆಸ್ತಿ ಹಕ್ಕು ನೀಡುವ ವಿಚಾರದ ಬಗ್ಗೆ ರಾಜ್ಯ ಸಚಿವ ಸಂಪುಟದ ಉಪ ಸಮಿತಿ ನೀಡಿರುವ ವರದಿಯನ್ನು ಕರ್ನಾಟಕ ರಾಜ್ಯ ಸಂಪುಟ ಅಂಗೀಕರಿದೆ. ಈ ಸಂಬಂಧದಲ್ಲಿ ಸರ್ಕಾರ ಹಿಂದೂ ಉತ್ತರಾಧಿಕಾರಿ ಕಾಯಿದೆಗೆ ತಿದ್ದುಪಡಿ ತರಲಿದೆ. ಈ ಉದ್ದೇಶಿತ ತಿದ್ದುಪಡಿಗೆ ಮುಂಚೆ ವಿವಾಹವಾಗಿಲ್ಲದ ಹೆಣ್ಣುಮಕ್ಕಳು ಆಸ್ತಿ ಹಕ್ಕಿಗೆ ಅರ್ಹರಾಗುತ್ತಾರೆ. ಆದರೆ ಕಾಯಿದೆ ತಿದ್ದುಪಡಿಗೆ ಮುಂಚೆಯೇ ತಂದೆ ಮತ್ತು ಗಂಡು ಮಕ್ಕಳ ಮಧ್ಯೆ ಆಸ್ತಿ ಪಾಲು ಆಗಿ ಹೋಗಿದ್ದರೆ ಹೆಣ್ಣುಮಕ್ಕಳು ಆಸ್ತಿ ಪಡೆಯಲು ಅನರ್ಹರಾಗುತ್ತಾರೆ ಎಂದೂ ಸ್ಪಷ್ಟಪಡಿಸಲಾಗಿದೆ.

ಚಲನ ಚಿತ್ರ

ಚಲನ ಚಿತ್ರಗಳಲ್ಲಿ ಹಾಗೂ ಚಲನಚಿತ್ರ ಪ್ರಚಾರ ಸಾಮಗ್ರಿಗಳಲ್ಲಿ ಅಶ್ಲೀಲತೆ ತಡೆಗಟ್ಟುವುದಕ್ಕಾಗಿ ಚಲನಚಿತ್ರ ಮಂಡಳಿ ರಚನೆ ಹಾಗೂ ಸೆನ್ಸಾರ್ ಮಂಡಳಿ ಪುನರ್ ರಚನೆ ಯೋಜನೆಗಳನ್ನು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವರು ಮಂಡಿಸಿದ್ದಾರೆ. ಚಲನಚಿತ್ರ ವಾಣಿಜ್ಯೋದ್ಯಮ ಮಂಡಳಿಯಿಂದ ರೂಪುಗೊಳ್ಳುವ ಚಲನಚಿತ್ರ ಮಂಡಳಿ ಸ್ವಯಂಸೇವಾ ಮಂಡಳಿ ಆಗಿರುತ್ತದೆ. ಅಗತ್ಯ ಬಿದ್ದಲ್ಲಿ ಇದನ್ನು ಶಾಸನಬದ್ಧ ಮಂಡಳಿಯಾಗಿ ಪರಿವರ್ತಿಸಲಾಗುವುದು. ರಾಷ್ಟ್ರದ ಎಲ್ಲಾ ಚಲನ ಚಿತ್ರ ನಿರ್ಮಾಣ ಕೇಂದ್ರಗಳಲ್ಲೂ ಮಂಡಳಿಯ ಪ್ರಾದೇಶಿಕ ಶಾಖೆಗಳಿರುತ್ತದೆ.

ಸಮಾನ ಹಕ್ಕು

ಅಪ್ರಾಪ್ತ ಮಕ್ಕಳ ವಿಚಾರದಲ್ಲಿ ತಂದೆ ಮತ್ತು ತಾಯಿ ಇಬ್ಬರಿಗೂ 'ಒಟ್ಟಾಗಿ' ಸಮಾನವಾದ ಹಕ್ಕುಗಳಿವೆ ಎಂಬ ಅಂಶವನ್ನು ಅಳವಡಿಸುವಂತೆ 1956 ಹಿಂದೂ ಅಪ್ರಾಪ್ತ(ಮಕ್ಕಳ)ಮತ್ತು ಪೋಷಕ(ಗಾರ್ಡಿಯರ್)ಕಾಯ್ದೆಯ 61ಎ ವಿಧಿಗೆ ತಿದ್ದುಪಡಿ ತರಬೇಕು ಎಂದು ಕಾನೂನು ಆಯೋಗ ಸಲಹೆ ಮಾಡಿದೆ. ಅಪ್ರಾಪ್ತ ವಯಸ್ಕ ಮಕ್ಕಳ ಪೋಷಣೆ ಮತ್ತು ಅವರು ಯಾರ ಬಳಿ ಇರಬೇಕು ಎಂಬ ವಿಷಯಗಳ ಬಗ್ಗೆ ಮಹಿಳೆಯರ ವಿಚಾರದಲ್ಲಿ ಇರುವ ತಾರತಮ್ಯ ಕಿತ್ತೊಗೆಯಲು ಆಯೋಗ ಅನೇಕ ಸಲಹೆಗಳನ್ನು ಮಾಡಿದೆ.

ಆಯೋಗದ ಈ ವರದಿಯನ್ನು ರಾಜ್ಯಸಭೆಯಲ್ಲಿ ಮಂಡಿಸಲಾಗಿದೆ.

ಶೌರ್ಯ ಚಕ್ರ

ದೆಹಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿ ಮೋನಿಷಾ ವರ್ಮ ಅವರು, ಸಾಹಸಕ್ಕಾಗಿ ನೀಡುವ 'ಶೌರ್ಯಚಕ್ರ' ಪ್ರಶಸ್ತಿ ಪಡೆದ ಪ್ರಥಮ ಮಹಿಳೆಯಾಗಿದ್ದಾರೆ. ಏಪ್ರಿಲ್-14ರಂದು ಅವರು ಈ ಪ್ರಶಸ್ತಿ ಸ್ವೀಕರಿಸಿದರು. ದೆಹಲಿ ಸಾರಿಗೆ ಸಂಸ್ಥೆ ಬಸ್ಸಿನಲ್ಲಿ 1938ರ ಆಗಸ್ಟ್ 11ರಂದು ಸಂಸ್ಥೆಯ 5 ನೌಕರರು ಮೋನಿಷಾ ಮೇಲೆ 'ಆಕ್ರಮಣ' ಮಾಡಲು ಯತ್ನಿಸಿದ್ದರು. ಅವರ ಜತೆ ಹೋರಾಡಿ ಬಸ್ಸಿನಿಂದ ಹೊರಗೆ ಧುಮುಕಿ ತಮ್ಮ ಜತೆ ಒಬ್ಬನನ್ನು ಎಳೆದು ತರುವಲ್ಲಿ ಯಶಸ್ವಿಯಾಗಿದ್ದರು. ಮೋನಿಷಾ ಅವರು "ರಕ್ಷಕ್" ಎಂಬ ಮಹಿಳಾ ಸಂಘಟನೆ ರಚಿಸಿದ್ದಾರೆ. ಇದು ಮಹಿಳೆಯರಿಗೆ ಜೂಡೋ, ಕರಾಟೆ ಕಲಿಕೆಗೆ ನೆರವಾಗುವುದು.

ಸಂಪಾದಕರು, ಪ್ರಕಾಶಕರು ಹಾಗೂ ಮುದ್ರಕರು ಎಚ್. ಎಸ್. ರಾಜೇಶ್ವರಿ, ಮಾನವಿ ಮುದ್ರಣಾಲಯ, ಪಂಚಾಯಿತಿ ರಸ್ತೆ, ಕಾಡುಗೋಡಿ ಅಂಚೆ, ಬೆಂಗಳೂರು — ೫೬೦೦೬೭.

ನಂ ಮ್ಯಾಗ್ (5) ಪಿಆರ್‌ಬಿ ಡಿಕ್ಲೇರ್ಡ್: 284 | 8889

ಮಾನಸ

ಮಹಿಳೆಯರ ಮೇಲೆ ನಡೆಯುವ ಅಮಾನವೀಯ ದೌರ್ಜನ್ಯ, ಹಿಂಸೆಗಳನ್ನು ಬೆಳಕಿಗೆ ತರುವುದಕ್ಕಾಗಿ.

ಶೋಷಿತ ವ್ಯವಸ್ಥೆಯನ್ನು, ಅದರ ವಿವಿಧ ರೂಪಗಳನ್ನು ಗುರುತಿಸುವುದಕ್ಕಾಗಿ

ಮಹಿಳೆಯರೊಂದಿಗೆ ಆತ್ಮೀಯ ಅರ್ಥಪೂರ್ಣ ಸಂವಾದಕ್ಕಾಗಿ.

ಮಹಿಳಾ ಆಂದೋಲನದ ಹೊಸ ದಿಕ್ಕುಗಳ ಹುಡುಕಾಟಕ್ಕಾಗಿ.

ವಿಳಾಸ : "ಮಾನಸ"
ಪಂಚಾಯಿತಿ ರಸ್ತೆ
ಕಾಡುಗೋಡಿ
ಬೆಂಗಳೂರು—560067

ಸೂಚನೆ:
ಬಿಡಿಪ್ರತಿ: 2ರೂ.
ವಾರ್ಷಿಕ ಚಂದಾ ;20ರೂ
ಆಜೀವ ಚಂದಾ : 250ರೂ
ಒಂದು ವಿಶೇಷ ಸಂಚಿಕೆಯೊಂದಿಗೆ
ಒಟ್ಟು ಹನ್ನೊಂದು ಸಂಚಿಕೆಗಳು
ಹಣವನ್ನು ಬ್ಯಾಂಕ್ ಡ್ರಾಫ್ಟ್, ಎಂ. ಓ.
ಮೂಲಕ ಸ್ವೀಕರಿಸಲಾಗುವುದು.